ಅಚಲ

ಮಾರ್ಚ್ 1995 ಬೆಲೆ : ರೂ. 2-00

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ, ಬೆಂಗಳೂರು

ದ್ವೈಮಾಸಿಕ



"ಅಚಲ" ಪತ್ರಿಕೆಯನ್ನು ಪಡೆಯ ಬಯಸು ವವರು ದಯವಿಟ್ಟು ಕೆಳಗಿನ ವಿಳಾಸಕ್ಕೆ ಹದಿನೈದು ರೂಪಾಯಿಗಳನ್ನು ಎಂ. ಓ/ಡ್ರಾಫ್ಟ್ ಮೂಲಕ ಕಳುಹಿಸಿ, ಕೂಪನ್‌ನಲ್ಲಿ ತಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಬೇಕು. ಚೆಕ್ ಮೂಲಕ ಹಣ ಕಳಿಸು ವವರು 20/ರೂ. ಗಳಿಗೆ ಕಳಿಸಬೇಕು. ಚಂದಾದಾರರು ತಮ್ಮ ವಿಳಾಸ ಬದಲಾದರೆ ಕೂಡಲೆ ಕಾರ್ಡಿನಲ್ಲಿ ಬರೆದು ತಿಳಿಸಬೇಕು.

❋

❋

ಚಂದಾ ವಿವರ :

ವಾರ್ಷಿಕ ಚಂದಾ	:	ರೂ.	15_00
ಅಜೀವ ಚಂದಾ	:	ರೂ.	150_00
ಚೆಕ್ ಮೂಲಕ	:	ರೂ.	160_00
ಸಂಸ್ಥೆಗಳಿಗೆ	:	ರೂ,	200_00
ಬಿಡಿ ಪ್ರತಿ	:	ರೂ.	2_00
ವಿಶೇಷ ಪ್ರತಿ	:	ರೂ,	3_50

❋

Printed at LIPI MUDRANA
Bugle Rock Road, Gandhibazar
Basavanagudi, BANGALORE-560 004.

Published by : Dr. Ramakrishna
on behalf of Jagruthi Mahila Adhyayana
Kendra, 26, I Main Road, Vyalikaval
BANGALORE-560 003
Editor : **N. Gayathri**

ಒಳಗೇನಿದೆ ?

* ಮಲ್ಲಿಗೀ................ನೀ ಹೊರಟ್ಟಿದ್ದೀಗ
ಎಲ್ಲಿಗೀ................
_ಡಾ. ಪ್ರೀತಿ ಶುಭಚಂದ್ರ
* ಹೋರಾಟದ ಆಶಾಕಿರಣ ಸೂಕಿ
* ಜಾಗತಿ ಭೂಪಟನಲ್ಲಿ ಮಹಿಳಾ ದಿನ

❋

ಲೇಖನ, ಹಣ ಕಳುಹಿಸಬೇಕಾದ ವಿಳಾಸ :

ಎನ್. ಗಾಯಿತ್ರಿ
ಬಿ-30, ರಿಸರ್ವ್ ಬ್ಯಾಂಕ್ ಸ್ಟಾಫ್ ಕ್ವಾರ್ಟರ್ಸ್
9ನೇಕ್ರಾಸ್, ಒಂದನೆ ಮೇನ್, ವಿಜಯನಗರ
2ನೇ ಹಂತ. ಬೆಂಗಳೂರು-560 0040

❋

ಆತ್ಮೀಯರೇ.

'ಅಚಲ' ಈ ಸಂಚಿಕೆಯೊಂದಿಗೆ ಹನ್ನೊಂದನೆಯ ವರ್ಷಕ್ಕೆ ಕಾಲಿಡುತ್ತಿದೆ. ಈ ಹತ್ತು ವರ್ಷಗಳಲ್ಲಿ ಅದು ಯಶಸ್ವಿಯಾಗಿ ಪ್ರಕಟವಾಗುವುದಕ್ಕೆ ಸಹಕರಿಸಿರುವ ಎಲ್ಲ ಲೇಖಕರು, ಚಂದಾದಾರರು, ಜಾಹಿರಾತು-ದಾರರು ಹಾಗೂ ಹಿತೈಷಿಗಳ ಪ್ರೀತಿ, ವಿಶ್ವಾಸಕ್ಕೆ ನಮ್ಮ ಅನಂತ ಕೃತಜ್ಞತೆಗಳು.

ಆದರೆ ಈ ಪತ್ರಿಕೆ ಇನ್ನೂ ಹೆಚ್ಚು ಅರ್ಥಪೂರ್ಣವಾಗಿ, ಸಶಕ್ತವಾಗಿ ಹೊರಬರಲು ಹೆಚ್ಚಿನ ಚಂದಾದಾರರ, ವಿಚಾರವಂತ ಲೇಖಕರ ಹೆಚ್ಚಿನ ಸಹಕಾರದ ಅಗತ್ಯವಿದೆ. ಅಷ್ಟೇ ಅಲ್ಲ, ಓದುಗರ ಟೀಕೆ, ಟಿಪ್ಪಣಿಗಳು ಪತ್ರಿಕೆಯನ್ನು ಬೆಳೆಸುತ್ತದೆ; ತಿದ್ದುತ್ತದೆ. ಇದಕ್ಕೆ ಹೃತ್ಪೂರ್ವಕ ಸ್ವಾಗತವಿದೆ.

_ಸಂ.

ಸಂಪಾದಕೀಯ

ಮಹಿಳಾ ಚಳುವಳಿ ಮತ್ತು ಕಲಿಕೆಯ ಪಾಠ

ಮಹಿಳಾ ಚಳುವಳಿಗೆ ಸ್ಪಷ್ಟವಾದ ರೂಪ, ಧ್ಯೇಯ, ಹೋರಾಟ ಮಾರ್ಗವನ್ನು ಮರುರೂಪಿಸಿಕೊಳ್ಳುವ ಪ್ರಯತ್ನ ಇತ್ತೀಚಿನ ದಿನಗಳಲ್ಲಿ ಈ ನಾಡಿನಲ್ಲಿ ನಡೆಯುತೊಡಗಿದೆ. ಇಂಥ ಹೊತ್ತಿನಲ್ಲಿ ಈ ಹೋರಾಟ ತತ್ವಗಳನ್ನು ರೂಪಿಸುವಲ್ಲಿ ಇದುವರೆಗಿನ ಮಹಿಳಾ ಹೋರಾಟಗಳ ಚಾರಿತ್ರಿಕ ಅನುಭವಗಳನ್ನು ತಳಹದಿಯನ್ನಾಗಿ ಮಾಡಿಕೊಳ್ಳುವುದು ಅವಶ್ಯಕವಾಗಿರುತ್ತದೆ. ಭಾರತದ ಚರಿತ್ರೆಯಲ್ಲಿ ಮಹಿಳೆಯರ ಪಾತ್ರವನ್ನು ಕುರಿತು ಹೇಳುವ ಇತಿಹಾಸಕಾರರು ಕೆಲವೇ ಮಂದಿ ಅಸಾಧಾರಣ ಸ್ತ್ರೀಯರ ಸಾಧನೆಗಳನ್ನು ಅಥವಾ ನಗರಗಳ ಮೇಲು ವರ್ಗಗಳ ಮಹಿಳೆಯರ ಸಂಘಟಿತ ಕಾರ್ಯ ಚಟುವಟಿಕೆಗಳನ್ನು ಸ್ಥೂಲವಾಗಿ ದಾಖಲಿಸುತ್ತಾರೆ. ಅದರಲ್ಲೂ ರಾಷ್ಟ್ರೀಯತಾವಾದಿ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡ ಇಂಥ ಮಹಿಳೆಯರ ಬಗ್ಗೆ ಸ್ವಲ್ಪ ಮಾಹಿತಿಯಷ್ಟೇ ನಮಗೆ ದೊರೆಯುತ್ತದೆ. ಆದರೆ ಗ್ರಾಮೀಣ ನೆಲೆಯಲ್ಲಿ ಅತ್ಯಂತ ಕೆಳಗಿನ ಜಾತಿ, ವರ್ಗಗಳಿಂದ ಬಂದ ನಿರ್ಗತಿಕರೂ, ನಿರಕ್ಷರಿಗಳೂ ಆದ ಮಹಿಳೆಯರೂ ಕೂಡ, ದೇಶದ ಹಲವಾರು ಕಡೆಗಳಲ್ಲಿ ಉಪ್ಪಿನ ಸತ್ಯಾಗ್ರಹ, ನಾಗರಿಕ ಅಸಹಕಾರ, ಭಾರತ ಬಿಟ್ಟು ತೊಲಗಿ ಮುಂತಾದ ಚಳುವಳಿಗಳಲ್ಲಿ ಪಾಲ್ಗೊಂಡಿದ್ದಕ್ಕೆ ಸಾಕ್ಷಿಗಳಿವೆ. ಹಲವು ಹಳ್ಳಿಗಳಲ್ಲಿ ಸಂಖ್ಯೆ, ಸಾಮರ್ಥ್ಯ ಎರಡರಲ್ಲೂ ಇಂಥ ಸ್ತ್ರೀಯರು ತಮ್ಮ ಪುರುಷರನ್ನು ಮೀರಿಸಿರುವುದು ಉಂಟು. ಆದರೆ ಇಂಥವರು ಹೋರಾಟದಲ್ಲಿ ಪಾಲ್ಗೊಂಡು ಪಡೆದ ಅನುಭವವೇನು ಎಂಬುದರ ಬಗ್ಗೆ ಹೆಚ್ಚಿನ ಅಧ್ಯಯನವಾಗಲಿ ಮಾಹಿತಿ ಸಂಗ್ರಹಗಳಾಗಲಿ ನಡೆದಿಲ್ಲ.

ಇದೇ ರೀತಿ ಹಳ್ಳಿಗಳಲ್ಲಿ ಸ್ಥಳೀಯ ನೆಲೆಗಳಲ್ಲಿ ದೀರ್ಘಕಾಲದಿಂದ ಪರಿಹಾರ ಕಾಣದೆ ಉಳಿದಿದ್ದ ಅನೇಕ ಬಗೆಯ ಆರ್ಥಿಕ ಶೋಷಣೆಗಳ ವಿರುದ್ಧ, ಹಳ್ಳಿಯ ಜಮೀನುದಾರಿ ಊಳಿಗಮಾನ್ಯದ ವಿರುದ್ಧ, ರಾಜರ ಆಳ್ವಿಕೆಯಡಿ, ಬ್ರಿಟಿಷರ ಆಧಿಪತ್ಯದ ಅಡಿಯಲ್ಲಿ ಹಲವು ಪ್ರದೇಶಗಳಲ್ಲಿ ನಡೆದ ಸಾಮೂಹಿಕ ಹೋರಾಟಗಳಲ್ಲಿ ಗ್ರಾಮೀಣ ಕೆಳಸ್ತರದಿಂದ ಬಂದ ಹೆಣ್ಣುಮಕ್ಕಳು ಲಕ್ಷಾಂತರ ಸಂಖ್ಯೆಗಳಲ್ಲಿ ಪಾಲ್ಗೊಂಡಿದ್ದಾರೆ. ಕಮ್ಯುನಿಸ್ಟ್ ಪಕ್ಷದ ಒಂದು ಅಂಗವಾದ ಕಿಸಾನ್ ಸಭಾ ಶಾಖೆಗಳ ಮೂಲಕ ಮಹಾರಾಷ್ಟ್ರದ ವರ್ಲಿಯಲ್ಲಿ ನಡೆದ ಬುಡಕಟ್ಟು ಜನರ ದಂಗೆ, ಅವಿಭಕ್ತ ಬಂಗಾಳದಲ್ಲಿ ನಡೆದ ತೇಭಾಗ ಚಳುವಳಿ ಹಾಗೂ ತೆಲಂಗಾಣದಲ್ಲಿ ನಡೆದ ನಡೆದ ರೈತಾಪಿ ಜನರ ಗೆರಿಲ್ಲಾ ಹೋರಾಟಗಳು ಹಾಗೆಯೇ ಅವಧದಲ್ಲಿ ಈ ಪಕ್ಷದಿಂದಾಗಿರದೆ ಬಾಬಾ ರಾಮಚಂದ್ರರ ನಾಯಕತ್ವದಡಿ ನಡೆದ ಗೇಣಿದಾರರ ಹೋರಾಟ ಮುಂತಾದವುಗಳಲ್ಲಿ ಹಳ್ಳಿಗಳಲ್ಲಿನ ಅತ್ಯಂತ ಕೆಳಗಿನ ನೆಲೆಗೆ ಸೇರಿದ ಅಸ್ಪೃಶ್ಯರು, ನಿರ್ಗತಿಕರು, ಜೀತದಾಳುಗಳು, ಭೂರಹಿತ ಕೃಷಿ ಕಾರ್ಮಿಕರು, ವಿಧವೆಯರು, ಮಾಲರು, ಮಾದಿಗರು, ಆಹಿರರು, ಚಮ್ಮಾರರು, ಕೂರ್ಮಿಗಳು, ಲಂಬಡ, ಕೋಯ, ಬಂಜಾರ, ಚೆಂಚ್ಚು ಮುಂತಾದ ಬುಡಕಟ್ಟುಗಳ ಜನ ಸಮೂಹಕ್ಕೆ ಸೇರಿದ ಮಹಿಳೆಯರು ತಮ್ಮ ಪುರುಷರ ಸಮನಾಗಿ ಹೋರಾಟಗಳಲ್ಲಿ ಪಾಲ್ಗೊಂಡು ಗಳಿಸಿಕೊಂಡ ಅನುಭವವೇನು ಎಂಬುದಕ್ಕೆ ಇಂದು ಕೆಲಮಟ್ಟಿಗಾದರೂ ಅಂಕಿ, ಅಂಶಗಳ, ಅನುಭವ ವಿವರಗಳ ದಾಖಲೆ, ಮಾಹಿತಿಗಳು ಲಭ್ಯವಿರುವುದಾದರೆ ಅದು ಇಂಥ ಎಡಪಂಥೀಯ ಚಳವಳಿಗಳಲ್ಲೇ.

ಈ ಚಳವಳಿಗಳಿಗೆ, ಅವು ಬೇರೆ ಬೇರೆ ಪ್ರದೇಶಗಳಲ್ಲಿ ನಡೆದಿದ್ದರೂ, ಸಮಾನವಾದ ಚೌಕಟ್ಟೊಂದು ಇತ್ತು. ಜಮೀನುದಾರಿಯಲ್ಲಿನ ಹಲವು ಬಗೆಯ ಶೋಷಣೆಗಳು, ಅನಧಿಕೃತ ಕಂದಾಯ ತೆರಿಗೆಗಳು, ಗೇಣಿ ಬಾಡಿಗೆಗಳು, ಫಸಲಿನ ಅಸಮಾನ ಪಾಲು, ಬಲವಂತದ ಜೀತಪದ್ಧತಿ ಹೆಣ್ಣು ಕೂಲಿಯಾಳುಗಳ ಮೇಲಿನ ಲೈಂಗಿಕ ದಬ್ಬಾಳಿಕೆಗಳು, ಅತ್ಯಾಚಾರಗಳು, ಬೆದರಿಕೆಗಳು ಮುಂತಾದವುಗಳ ವಿರುದ್ಧವಾಗಿ ಈ ಚಳವಳಿಗಳು ಸಂಘಟಿತವಾಗಿದ್ದವು. ಬದುಕಿಗಾಗಿಯೇ

ಸದಾ ಹೋರಾಟ ಮಾಡಬೇಕಾದ ನಿಮ್ನಸ್ತರದ ಗ್ರಾಮೀಣ ಮಹಿಳೆಯರು ಈ ಚಳವಳಿಗೆ ಬರುವುದರ ಹಿಂದೆ ತಮ್ಮ ಬದುಕಿನ ಶೋಷಿತ ಸ್ಥಿತಿಯಿಂದ ಬಿಡುಗಡೆ ಹೊಂದುವೆವೆಂಬ ಆಶಾವಾದ ದೊಡ್ಡ ಪ್ರೇರಣೆಯಾಗಿತ್ತು. ಕಿಸಾನ್ ಸಭಾಗಳ ನಾಯಕತ್ವ ಕೂಡ, ಇಂಥ ಮಹಿಳೆಯರು ತಮ್ಮ ಚಳವಳಿಯ ಸ್ಥಿರತೆಗೆ, ಸಾಫಲ್ಯಕ್ಕೆ ಎಷ್ಟು ಮಹತ್ವದ ಬಲವೊದಗಿಸಬಲ್ಲರೆಂಬುದನ್ನು ಗ್ರಹಿಸಿ, ಅವರನ್ನು ದೊಡ್ಡ ಸಂಖ್ಯೆಯಲ್ಲಿ ಚಳವಳಿಗೆ ಧುಮುಕುವಂತೆ ಎಲ್ಲ ವಿಧವಾದ ಪ್ರಚೋದನೆ, ಬೆಂಬಲ, ಆಶಾವಾದಗಳನ್ನು ಒದಗಿಸಿತ್ತು.

ಈ ಎಲ್ಲ ಹೋರಾಟಗಳೂ ಪೂರ್ಣಗುರಿಯನ್ನು ಮುಟ್ಟದೆ ಭಿನ್ನ ಕಾರಣಗಳಿಂದಾಗಿ ಸ್ಥಗಿತವಾಗಿ, ಪಾಲ್ಗೊಂಡ ಮಹಿಳೆಯರ ಆಶಾಭಂಗದ ಅನುಭವಗಳನ್ನು ನಡೆಸಿ ದಾಖಲುಗೊಳಿಸಿವೆ. ಇಂದು ದೇಶದಲ್ಲಿ ಬಹಳ ಕಡೆ ರೂಪುಗೊಂಡಿರುವ ಸ್ವಾಯತ್ತ ಮಹಿಳಾ ಚಳುವಳಿಯನ್ನು ಎತ್ತಿ ಹಿಡಿವ ಸಂಘಟನೆಗಳು ಈ ಮೇಲೆ ಹೇಳಿದ, ಚರಿತ್ರೆಯಲ್ಲಿ ದಾಖಲುಗೊಂಡ ಮಹಿಳೆಯರ ಅನುಭವಗಳನ್ನು ಅವೆಲ್ಲಾ ಪಿತೃಪ್ರಧಾನ ವ್ಯವಸ್ಥೆಯ ಪುರುಷಾಧಿಪತ್ಯದ ಸಂಚಿನಿಂದಲೇ ಆದ ಅನ್ಯಾಯಗಳೆಂಬ ದೃಷ್ಟಿಕೋನದಿಂದಲೇ ವಿಶ್ಲೇಷಿಸುವ, ವ್ಯಾಖ್ಯಾನಿಸುವ ಯತ್ನಗಳನ್ನು ನಡೆಸುತ್ತಾ ಬರುತ್ತಿವೆ. ಆದರೆ ಇಂಥ ಪ್ರಬಲವಾದ, ಮಹಿಳೆಯರ ಹೋರಾಟದ ಚರಿತ್ರೆಯೊಂದರ ವಿವರಗಳು ನಮಗೆ ಲಭ್ಯವಿರುವಾಗ ಅವುಗಳಿಂದ ಕಲಿಯಬೇಕಾದ ಇತ್ಯಾತ್ಮಕ ಅಂಶಗಳೂ ಇರುತ್ತವೆ. ಉದಾಹರಣೆಗೆ ಜೀವಮಾನವಿಡೀ ಯಾವುದೇ ಅಧಿಕಾರದ ವಲಯಕ್ಕೆ ಸೇರಿರದ ನೆಲೆಯಿಂದ ಬಂದ ಮಹಿಳೆಯರನ್ನು ಬಹು ದೊಡ್ಡ ಪ್ರಮಾಣದಲ್ಲಿ ಸಂಘಟಿಸಲು ಅಲ್ಲಿ ಸಾಧ್ಯವಾಗಿತ್ತು. ಆ ರೀತಿ ಚಳವಳಿಗೆ ಪ್ರವೇಶ ಪಡೆದ ಸ್ತ್ರೀಯರು ಮಹಿಳೆಯರ ನೆಲೆ ಎಂದರೆ ಕೇವಲ ಕುಟುಂಬ ಎಂಬ ಸಾಂಪ್ರದಾಯಿಕ ನಿರ್ಬಂಧಗಳಿಂದ ಮೊದಲ ಬಾರಿಗೆ ಹೊರಬರಲು ಸಾಧ್ಯವಾಗಿ ಅದನ್ನು ಕಲಿತರು.

ಸಭೆಗಳಲ್ಲಿ, ಮೆರವಣಿಗೆಗಳಲ್ಲಿ, ಕಣಜಗಳ ಆಕ್ರಮಣ, ಲೂಟಿ ಕಾರ್ಯಗಳಲ್ಲಿ, ಪೋಲೀಸರ ವಿರುದ್ಧವಾದ ಹೋರಾಟಗಳಲ್ಲಿ, ಸಶಸ್ತ್ರ ಗೆರಿಲ್ಲಾ ಯುದ್ಧಗಳಲ್ಲಿ ಕೂಡ, ಪುರುಷರಷ್ಟೇ ಬದ್ಧತೆಯಿಂದ, ಅವರಿಗಿರುವಷ್ಟೇ ರಾಜಕೀಯದ ಪ್ರಜ್ಞೆಯೊಂದಿಗೆ, ಅನಿಯಂತ್ರಿತ ಕಾರ್ಯೋತ್ಸಾಹವನ್ನು, ಸೃಜನಶೀಲ ಕರ್ತೃತ್ವಕ ಶಕ್ತಿಯನ್ನೂ, ಸಾಮರ್ಥ್ಯವನ್ನೂ ಮಹಿಳೆಯರು ಪ್ರಕಟಿಸಿದ್ದರು. ಆದರೆ ಇವರ ಈ ಸಾಮರ್ಥ್ಯವನ್ನು ಗುರುತಿಸಿ, ಇವರಲ್ಲಿನ ಶಕ್ತಿಯನ್ನು ನಾಯಕತ್ವದ ಕಾಲುವೆಯತ್ತ ತಿರುಗಿಸಿ, ದೊಡ್ಡ ಚಳುವಳಿಗೆ ಮಹಿಳೆಯರದೊಂದು ಸಶಕ್ತ ಸಂಘಟನೆ ಬೆಳೆಯುವಂತೆ ಮಾಡುವಲ್ಲಿ ಕಿಸಾನ್‌ಸಭಾಗಳ ನಾಯಕವೃಂದ ಹೆಚ್ಚು ಸಾಮರ್ಥ್ಯ ಪ್ರಕಟಿಸಲಿಲ್ಲ ಎಂಬುದೂ ಇಂದು ಚರಿತ್ರೆಯೇ. ಪಿತೃಪ್ರಧಾನ ಮೌಲ್ಯಗಳಿಂದ ಮುಕ್ತರಾಗಿಲ್ಲದ ಮನಸ್ತರಗಳ ಪುರುಷ ವರ್ಗವು ನೇತೃತ್ವ ವಹಿಸಿದ್ದರಿಂದಲೇ, ಇಂಥ ಚಳವಳಿಗೆ ಲಿಂಗ ಜಾತಿಯಿಂದಾಗಿ ಹುಟ್ಟುವ ವಿಶಿಷ್ಟ ಸ್ತ್ರೀ ಸಮಸ್ಯೆಗಳನ್ನು ಎದುರಿಸುವ ಬಗ್ಗೆ ಸರಿಯಾದ ತಾತ್ವಿಕ ನೀತಿಯೊಂದು ರೂಪುಗೊಳ್ಳುವುದು ಅಸಾಧ್ಯವಾಯಿತೆಂದೂ, ಅದರಿಂದಾಗಿ ಮಹಿಳೆಯರನ್ನು ಕುರಿತ ತಾರತಮ್ಯ ಈ ಚಳವಳಿಗಳ ಒಳಗೂ ಸೂಕ್ಷ್ಮವಾಗಿ ಮುಂದುವರೆದಿದ್ದು ಪಾಲ್ಗೊಂಡ ಸ್ತ್ರೀಯರ ಆಶಾಭಂಗಕ್ಕೆ ಅದೇ ಮುಖ್ಯ ಕಾರಣವೆಂದು ಅರ್ಥೈಸಲಾಗುತ್ತದೆ. ಇಂಥ ವಿಶ್ಲೇಷಣೆಯ ನಿಜಾಂಶವನ್ನು ನಿರಾಕರಿಸದೆಯೇ ಇನ್ನೂ ಮುಂದಿನ ಕೆಳಸ್ತರದ ಅಧ್ಯಯನಗಳು ಸಮಗ್ರ ದೃಷ್ಟಿಯಿಂದ ನಡೆಯಬೇಕಾಗಿರುವುದನ್ನು ಮರೆಯಬಾರದು,

ಚಳವಳಿಯೊಂದರ ಸೋಲಿಗೆ ಸಾವಿರ ಕಾರಣಗಳಿದ್ದಾವು. ಆದರೂ ಇಂಥ ಚಳವಳಿಗಳಿಂದ ಕಲಿಯಬೇಕಾದ ಪಾಠ ಕೇವಲ ವಿಮುಖತೆಯಲ್ಲ, ಬದಲಿಗೆ ನಮ್ಮ ನಾಡಿನಲ್ಲೂ ಕಳೆದ ದಶಕದಲ್ಲಿ ರೈತ ಚಳವಳಿ, ದಲಿತ ಚಳವಳಿಗಳಲ್ಲಿ ಪಾಲ್ಗೊಂಡ ಮಹಿಳೆಯರ ಅನುಭವಗಳ ನೆಲೆಯೇನು ? ದೇಶದಲ್ಲಿ ಕೃಷಿ ಪ್ರಧಾನ ನೆಲೆಗಳಲ್ಲಿ ಸ್ತ್ರೀಯರ ದುಡಿಮೆ ಹೆಚ್ಚಾಗಿರುವ ಪ್ರದೇಶಗಳು ತಮಿಳುನಾಡಿನಂಥವು ಹಲವಾರು ಇದ್ದರೂ ಅಲ್ಲೆಲ್ಲಾ ಏಕೆ ಇಂಥ ಚಳವಳಿಗಳು ತೀವ್ರವಾಗುವುದು ಅಸಾಧ್ಯವಾಗಿದೆ ? ಶೇತ್ಕಾರಿ ಚಳವಳಿ ಅಥವಾ ನರ್ಮದಾಬಚಾವೋದಂಥ ಚಳವಳಿಗಳಲ್ಲಿ ಈಗಲೂ ಮಹಿಳೆಯರು ಇಂಥ ನಿಮ್ನ ನೆಲೆಗಳಿಂದ ಬಂದವರು ಸಂಘಟಿತರಾಗಿ ಹೋರಾಡಲು ಏಕೆ ಸಾಧ್ಯವಾಗಿದೆ ? ಎಂಬಂಥ ಮೂಲಭೂತ ಸಮಸ್ಯೆಗಳು ಇಂದು ಶೋಧಿತವಾಗಬೇಕಾದ್ದು ಅತ್ಯವಶ್ಯಕ.

ಡಾ. ಬಿ. ಎನ್. ಸುಮಿತ್ರಾ ಬಾಯಿ

ಚಿತ್ತಗಾಂಗ್‌ನ ವೀರರಮಣಿ ಕಲ್ಪನಾ

ವಸಾಹತುಶಾಹಿ ಆಡಳಿತದಿಂದ ಭಾರತವನ್ನು ಬಿಡುಗಡೆ ಮಾಡಿದ ರಾಷ್ಟ್ರೀಯ ಸಂಗ್ರಾಮದಲ್ಲಿ ಗಾಂಧೀಜಿಯವರ ಅಹಿಂಸಾತ್ಮಕ ಹೋರಾಟದ ಪ್ರಯತ್ನ ಯಶಸ್ವಿಯಾದದ್ದು ನಿಜ, ಆದರೆ ಈ ಯಶಸ್ಸಿಗೆ ಹಲವಾರು ಕ್ರಾಂತಿಕಾರಿ ಹೋರಾಟದ ನದಿಗಳೂ ಸೇರಿ ಪರಿಣಾಮ ಬೀರಿತ್ತೆಂಬುದರಲ್ಲಿ ಅನುಮಾನವೇ ಇಲ್ಲ. ಈ ರೀತಿ ರಾಷ್ಟ್ರೀಯ ಚಳುವಳಿಯಲ್ಲಿ ತಮ್ಮದೇ ಆದ ರೀತಿಯಲ್ಲಿ ಪಾಲ್ಗೊಂಡು, ದೇಶಪ್ರೇಮ ಸ್ಪರ್ಶದಿಂದ ಅದಕ್ಕೆ ವಿದ್ಯುತ್ ಸಂಚಾರ ಕೊಟ್ಟವರು ಚಿತ್ತಗಾಂಗ್ ಕ್ರಾಂತಿ ವೀರರು. ಬ್ರಿಟಿಷ್ ಸಾಮ್ರಾಜ್ಯಶಾಹಿ ಶಸ್ತ್ರಾಗಾರವನ್ನು ಈ ಚಿತ್ತಗಾಂಗ್ ಕ್ರಾಂತಿಯ ವೀರರು 'ಮಾಸ್ಟರ್ ದಾ' ಎಂದು ಜನಪ್ರಿಯರಾಗಿದ್ದ ಸೂರ್ಯಸೇನ್‌ರವರ ನೇತೃತ್ವದಲ್ಲಿ ಲೂಟಿ ಮಾಡಿದರು. ಈ ಸಾಹಸ ಕಾರ್ಯದಲ್ಲಿ ಭಾಗವಹಿಸಿದ್ದ ಕಲ್ಪನಾ ಜೋಷಿ ಇನ್ನಿಲ್ಲ.

'ಚಿತ್ತಗಾಂಗ್ ಶಸ್ತ್ರಾಗಾರ ಮುತ್ತಿಗೆ ಪ್ರಕರಣ' ದಲ್ಲಿ ಸೂರ್ಯಸೇನ್, ಅನಂತ್ ಸಿಂಗ್ ಮತ್ತು ಕಲ್ಪನಾರವರಿಗೆ ಮರಣದಂಡನೆ ವಿಧಿಸಲಾಗಿತ್ತು. ಆದರೆ 17ರ ವಯಸ್ಸಿನ ಬಾಲಕಿಯಾದ ಕಲ್ಪನಾಗೆ ಚಿಕ್ಕ ವಯಸ್ಸೆಂದು ಮರಣದಂಡನೆ ವಿಧಿಸದೆ ಜೀವಾವಧಿ ಶಿಕ್ಷೆಯಾಯಿತು. ಜೀವಾವಧಿ ಶಿಕ್ಷೆ ಅನುಭವಿಸಿ ಬಿಡುಗಡೆ ನಂತರ ಮಹಾಕವಿ ರವೀಂದ್ರನಾಥ ಠಾಗೂರ್ ಕಲ್ಪನಾರವರಿಗೆ ಬರೆದ ಪತ್ರದಲ್ಲಿ — "ಸುಮಾರು ದಿನಗಳ ನಂತರ ನೀನು ಬಿಡುಗಡೆಯಾಗಿದ್ದೀಯೆ. ಪ್ರತಿದಿನವು ಶಾಂತಿ ಮತ್ತು ಕ್ರಿಯಾಶೀಲತೆಯನ್ನು ಪಡೆದು ನೀನು ಬೆಳೆಯಬೇಕು. ನಮ್ಮ ದೇಶದಲ್ಲಿ ಇನ್ನೂ ಮಹತ್ತರ ಕಾರ್ಯಗಳನ್ನು ಮಾಡಬೇಕಾಗಿದೆ. ಅದಕ್ಕಾಗಿ ಯಾವುದಕ್ಕೂ ಹಿಂಜರಿಯದೆ ದೃಢ ಚಿಂತನೆಯುಳ್ಳ ಮನಸ್ಸನ್ನು ನೀನು ಪಡೆಯಬೇಕು. ನೀನು ಪಡೆದ ಯಾತನಾಮಯ ಅನುಭವ ನಿನ್ನ ಬಾಳಿಗೆ ಪೂರ್ಣವಾದ ತೇಜಸ್ಸನ್ನು ಕೊಡಲಿ ಇದು ನನ್ನ ಆಶೀರ್ವಾದ," ಎಂದಿದ್ದಾರೆ.

ಚರಿತ್ರೆಯನ್ನು ಸೃಷ್ಟಿಸಿದ ವೀರಾಂಗನೆ ಕಲ್ಪನಾ ಅವರ ವೀರ ಚರಿತ್ರೆ ಎಂದೆಂದಿಗೂ ಸ್ಮರಣೀಯ. ಚಿತ್ತಗಾಂಗ್‌ನ ದಕ್ಷಿಣದಲ್ಲಿ ಹರಿಯುವ ಕರ್ಣಪೂರಿ ನದಿಯ ತೀರದಲ್ಲಿ ಇರುವ ಶ್ರೀಪೂರ್ ಎನ್ನುವ ಗ್ರಾಮದಲ್ಲಿ ಒಂದು ಜಮೀನುದಾರ ಕುಟುಂಬದಲ್ಲಿ ಜನಿಸಿದವರು ಕಲ್ಪನ. ತಂದೆ ರಮೇಶ ಚಂದ್ರಸೇನ್, ತಾಯಿ ಶೋಬಾನದೇವಿಯವರ ಮಗಳಾಗಿ 1914ರ ಆಗಸ್ಟ್ 17ರಂದು ಕಲ್ಪನ ಜನಿಸಿದರು. ತನ್ನ ನಾಲ್ಕನೇ ವಯಸ್ಸಿನಲ್ಲೆ ಪುಸ್ತಕಗಳನ್ನು ಓದಿಸಿದ ಕಲ್ಪನ, ತನ್ನ 11ನೇ ವಯಸ್ಸಿನಲ್ಲಿ ಕ್ರಾಂತಿವೀರರ ಚರಿತ್ರೆಗಳನ್ನು ಹುಡುಕಾಡಿ ಓದಿದರು. ಅವರ ಇಬ್ಬರು ಚಿಕ್ಕಪ್ಪಂದಿರು 1020ನೇ ವರ್ಷದಲ್ಲಿ ನಡೆದ ಅಸಹಕಾರ ಚಳುವಳಿಯಲ್ಲಿ ಭಾಗವಹಿಸಿ ಜೈಲಿಗೆ ಹೋಗಿದ್ದು ಅವರಿಗೆ ದೊಡ್ಡ ಸ್ಫೂರ್ತಿಯನ್ನು ತಂದುಕೊಟ್ಟಿತು. ಅವರು ಸಣ್ಣ ಹುಡುಗಿಯಾಗಿದ್ದಾಗ ದೊಡ್ಡ ವಿಜ್ಞಾನಿಯಾಗಬೇಕೆಂದು ಆಸೆಪಟ್ಟಿದರು. ಆದರೆ ಸ್ವಾತಂತ್ರ್ಯ ಸಂಗ್ರಾಮ ಅವರನ್ನು ಕೈ ಬೀಸಿ ಕರೆಯಿತು. ತನ್ನ 7ನೇ ವಯಸ್ಸಿನಲ್ಲೇ ಮಹಾತ್ಮ ಗಾಂಧಿಯವರನ್ನು ಭೇಟಿಯಾಗಿ ಭಾವೋದ್ರೇಕಗೊಂಡು ತನ್ನ ಹತ್ತಿರವಿದ್ದ ಚಿನ್ನದ ಒಡವೆಗಳನ್ನು ಗಾಂಧೀಜಿಯವರಿಗೆ ಬಿಚ್ಚಿಕೊಟ್ಟವರು ಕಲ್ಪನ. ಆದರೆ ಏನೂ ಅರಿಯದ ಬಾಲಕಿಯಿಂದ ಒಡವೆಗಳನ್ನು ತೆಗೆದುಕೊಳ್ಳಲು ಗಾಂಧೀಜಿ ನಿರಾಕರಿಸಿದರು.

ಇತ್ತೀಚೆಗೆ ಫೆಬ್ರವರಿ 8 ರಂದು ಭಾರತದ ಮಹಿಳಾ ಚಳುವಳಿಯ ವೀರರಮಣಿಯರಲ್ಲೊಬ್ಬರಾದ ಕಲ್ಪನಾ ಜೋಷಿ ನಿಧನರಾದರು. ಈ ಸಂದರ್ಭದಲ್ಲಿ ಅಸ್ತಂಗತಳಾದ ಈ ಕೆಂಪು ತಾರೆಗೆ 'ಅಚಲ' ನಮನವನ್ನು ಸಲ್ಲಿಸುತ್ತದೆ.

ಗುಲಾಮಗಿರಿಯಲ್ಲಿ ಜಡವಾಗಿ ಮಲಗಿದ್ದ ಯುವ ಸಮುದಾಯವನ್ನು ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ಎದ್ದೇಳಿಸುವ ಮಹಾನ್ ಯಜ್ಞದಲ್ಲಿ ಕಲ್ಪನ ಸೇರಿದರು. ದೇಹದಾರ್ಢ್ಯವನ್ನು ಬೆಳೆಸಿಕೊಳ್ಳಲು ವ್ಯಾಯಾಮ ಮಾಡಿದರು. ಹೇರಳವಾದ ಪುಸ್ತಕಗಳನ್ನು ಓದಿದರು. ಭೂಗತ ಕ್ರಾಂತಿಕಾರಿಗಳಿಂದ ತುಫಾಕಿ ಬಳಸುವ ತರಬೇತು ಪಡೆದರು. ಸೂರ್ಯಸೇನ್ ನೇತೃತ್ವದಲ್ಲಿ ನಡೆದ ಚಿತ್ತಗಾಂಗ್ ಧಾಳಿಯೂ ಸೇರಿದಂತೆ ಹಲವಾರು ಹೋರಾಟಗಳಲ್ಲಿ ಭಾಗಿಯಾದರು, ಸೆರೆಮನೆ ಸೇರಿದರು. ಜೀವಾವಧಿ ಶಿಕ್ಷೆ ಅನುಭವಿಸಿದರು.

1939ರ ಮೇ 1 ರಂದು ಕಲ್ಪನ ಬಿಡುಗಡೆಯಾದ ನಂತರ ಕಮ್ಯುನಿಸ್ಟ್ ಪಕ್ಷಕ್ಕೆ ಸೇರಿಕೊಂಡರು. 1943ರ ಆಗಸ್ಟ್‌ನಲ್ಲಿ ಆಗ ಭಾರತದ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿಗಳಾಗಿದ್ದ ಕಾಂ. ಪಿ. ಸಿ. ಜೋಷಿ ಯವರನ್ನು ಮದುವೆಯಾದರು. ಸ್ವಾತಂತ್ರ್ಯಕ್ಕೆ ಮೊದಲು ಮತ್ತು ನಂತರದ ಅನೇಕ ಹೋರಾಟಗಳಲ್ಲಿ ಭಾಗವಹಿಸಿದ್ದ ಈ ವೀರರಮಣಿ ತನ್ನ ಅಂತಿಮ ಕಾಲದ ವರೆಗೆ ಕಮ್ಯುನಿಸ್ಟ್ ಧ್ಯೇಯಕ್ಕಾಗಿ ಅಚಲವಾದ ನಂಬಿಕೆ ಯಿಂದ ದುಡಿದರು.

—ನಾನ್ಯಾಕೆ ಮಾತನಾಡುವುದಿಲ್ಲ
ಬಯಕೆಗಳ ಬಗ್ಗೆ
ಎಲೆಗಳ ಬಗ್ಗೆ
ನನ್ನ ನಾಡಿನ ಮಹಾ ಅಗ್ನಿಪರ್ವತಗಳ ಬಗ್ಗೆ
ಎಂದು ನೀವು ಕೇಳುತ್ತೀರಿ
ಆದರೆ ಹ್ಯಾಗೆ ಮಾತಾಡಲಿ ?
ನೋಡಿ ಬೀದಿಯ ಮೇಲೆ ರಕ್ತವಿದೆ

—ಪಾಬ್ಲೋ ನೆರೂಡ

Statement about Ownership and other particulars about Newspaper ACHALA

FORM **IV** (See Rule 8)

1 Place of Publication : Bangalore, Karnataka State

2 Periodicity of its Publication : Bi-Monthly

3 Printers Name : K. N. Balakrishna
Lipi Mudrana
Basavanagudi
Bangalore-4

Nationality : Indian

Address : 26, 1st Main, 11th Cross, Vyalikaval, Bangalore-3

4 Publisher's Name : Dr. G. Ramakrishna for Jagruthi Mahila Adhyayana Kendra Bangalore

Nationality : Indian

Address : 26. 1st Main, 11th Cross Vyalikaval, Bangalore-3

5 Editor's Name : N. Gayathri

Nationality : Indian

Address : 26, 1st Main, 11th Cross Vyalikaval, Bangalore-3

6 Name & Address of individuals who own the Newspaper : Dr. G. Ramakrishna 26, 1st Main, 11th Cr. Vyalikaval Bangalore-560 003

I, Dr. G. Ramakrishna, here by declare that the particulars given above are true to the best of my knowledge & belief.

Bangalore
Date : 1-3-1995

Sd-
Dr. G. Ramakrishna

ದೆಹಲಿಯಲ್ಲಿ ರಾಷ್ಟ್ರೀಯ ಮಹಿಳಾ ಸಮಾವೇಶ

ದೆಹಲಿಯಲ್ಲಿ ಇತ್ತೀಚೆಗೆ ಫೆ. 27 ಮತ್ತು 28 ರಂದು ನಡೆದ ಎರಡು ದಿನಗಳ ಕಾಲ ನಡೆದ ರಾಷ್ಟ್ರೀಯ ಮಹಿಳಾ ಸಮಾವೇಶದಲ್ಲಿ ವಿವಿಧ ಸಂಘಟನೆಗಳಿಂದ ಬಂದಿದ್ದ ಸುಮಾರು 200 ಮಹಿಳಾ ಕಾರ್ಯಕರ್ತರು ಭಾಗವಹಿಸಿದ್ದರು. ಈ ಸಮಾವೇಶದಲ್ಲಿ ಬೀಜಿಂಗ್‌ನಲ್ಲಿ ಭಾರತದ ಪರವಾಗಿ ಮಂಡಿಸಲಾಗುವ ಅಧಿಕೃತ ವರದಿಯನ್ನು ಕಟುವಾಗಿ ಟೀಕಿಸಲಾಯಿತು ಮತ್ತು ಮಹಿಳೆಯರ ಸ್ಥಾನಮಾನವನ್ನು ಕುರಿತ ಪರ್ಯಾಯ ವರದಿಯನ್ನು ಏಳು ಮುಖ್ಯ ವಿಷಯಗಳಿಗೆ ಕೇಂದ್ರೀಕರಿಸಿ ಸಿದ್ಧಪಡಿಸಲಾಯಿತು.

ಈ ಸಮಾವೇಶವನ್ನು ಏಳು ರಾಷ್ಟ್ರೀಯ ಮಹಿಳಾ ಸಂಘಟನೆಗಳು ಜಂಟಿಯಾಗಿ ವ್ಯವಸ್ಥೆ ಮಾಡಿದ್ದವು — AIWC, ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ನ್ಯಾಷನಲ್ ಫೆಡರೇಷನ್ ಆಫ್ ಇಂಡಿಯನ್ ವಿಮೆನ್, ಮಹಿಳಾ ಅಭಿವೃದ್ಧಿ ಅಧ್ಯಯನ ಕೇಂದ್ರ, ಜಾಯಿಂಟ್ ವಿಮೆನ್ಸ್ ಪ್ರೋಗ್ರಾಂ, ಮಹಿಳಾ ದಕ್ಷತಾ ಸಮಿತಿ ಮುಂತಾದವು. ಈ ಸಮಾವೇಶದಲ್ಲಿ 9 ವರದಿಗಳನ್ನು ಸಿದ್ಧಗೊಳಿಸಲಾಯಿತು — 1) ಮಹಿಳೆಯರ ಮೇಲೆ ರಚನಾತ್ಮಕ ಹೊಂದಾಣಿಕೆಯ ಯೋಜನೆಗಳ ಪ್ರಭಾವ 2) ಧಾರ್ಮಿಕ ಮೂಲಭೂತವಾದಿತನ 3) ಮಹಿಳೆಮತ್ತು ರಾಜಕೀಯ ಭಾಗವಹಿಸುವಿಕೆ 4) ಮಹಿಳೆ ಮತ್ತು ಸಮೂಹ ಮಾಧ್ಯಮ 5) ಮಹಿಳೆಯರ ಮೇಲಿನ ಅತ್ಯಾಚಾರ 6) ಮಹಿಳೆ ಮತ್ತು ಕಾನೂನು 7) ಮಹಿಳೆ ಮತ್ತು ಆರೋಗ್ಯ, ಜನಸಂಖ್ಯಾ ಯೋಜನೆ 8) ಕುಟುಂಬ 9) ಮಹಿಳೆ ಮತ್ತು ವಿದ್ಯಾಭ್ಯಾಸ.

ಈ ಒಂಭತ್ತು ವಿಷಯಗಳಿಗೆ ಸಂಬಂಧಪಟ್ಟ ಸಲಹೆ, ಸೂಚನೆಗಳನ್ನು ನ್ಯೂಯಾರ್ಕ್‌ನಲ್ಲಿ ಮೊದಲ ವಾರದಲ್ಲಿ ನಡೆಯುವ ಸಿದ್ಧತಾ ಸಭೆಗೆ ಕಳುಹಿಸಿಕೊಡಲಾಗುವುದು. ಅಂತಿಮವಾಗಿ ಅಲ್ಲಿ ಚರ್ಚೆಯ ನಂತರ ಸಿದ್ಧಪಡಿಸಿದ ಮಾಹಿತಿಯನ್ನು ಕಿರುಹೊತ್ತಿಗೆಗಳಲ್ಲಿ ಮುದ್ರಿಸಲಾಗುವುದು. ಬೀಜಿಂಗ್ ಸಮಾವೇಶದಲ್ಲಿ ಭಾಗವಹಿಸುವ ಪ್ರತಿನಿಧಿಗಳಿಗೆ ಚರ್ಚೆಯಲ್ಲಿ ಭಾಗವಹಿಸಲು ಈ ಮಾಹಿತಿಗಳು ನೆರವಾಗಲೆಂದು ಸಿದ್ಧಗೊಳಿಸಿದೆ.

ಮಹಿಳಾ ಸಂಘಟನೆಗಳ ಈ ವಿಶೇಷ ಉತ್ಸಾಹ ಮತ್ತು ಕ್ರಿಯಾಶೀಲತೆಯು ಬಹುಮುಖ್ಯವಾಗಿ ಎರಡು ಉದ್ದೇಶಗಳನ್ನು ಸಫಲಗೊಳಿಸುತ್ತದೆ : ಮೊದಲನೆಯದಾಗಿ, ಮಹಿಳಾ ಚಳುವಳಿಯ ಭಾಷೆ ಮತ್ತು ಘೋಷಣೆಗಳನ್ನು ಸರ್ಕಾರಕ್ಕೆ ಸರಿಯಾದ ರೀತಿಯಲ್ಲಿ ಮನವರಿಕೆ ಮಾಡಿಕೊಡುವುದು. ಮಹಿಳೆಯರ ದುಸ್ಥಿತಿಯು ಹೆಚ್ಚುತ್ತಿರುವಲ್ಲಿ ಸರ್ಕಾರದ ನಿಷ್ಕ್ರಿಯತೆಯನ್ನು ಮುಚ್ಚುವಂತೆ ತಯಾರಾಗಿರುವ ಸರ್ಕಾರದ ವರದಿಯ ನಿಜ ಸ್ವರೂಪವನ್ನು ಪರಿಚಯಿಸುವುದು. ಎರಡನೆಯದಾಗಿ, ಬಹುರಾಷ್ಟ್ರೀಯ ಕಂಪೆನಿಗಳ ಅನುದಾನದಿಂದ ತಮ್ಮದೇ ರಚನೆಗಳನ್ನು ಸೃಷ್ಟಿಸಿಕೊಂಡು ಭಾರತದ ಮಹಿಳಾ ಚಳುವಳಿಯ ಗೊತ್ತುಗುರಿಗಳನ್ನು ನಿರ್ಧರಿಸುತ್ತಿರುವ ವಿದೇಶಿ ಅನುದಾನ ಪಡೆಯುವ ಮಹಿಳಾ ಸಂಘಟನೆಗಳ ಸ್ವರೂಪವನ್ನು ಖಂಡಿಸುತ್ತಲೇ, ದೇಶದ ಸಾರ್ವಭೌಮತ್ವವನ್ನು ರಕ್ಷಿಸುವ ನಿರ್ಣಯವನ್ನು ಇಲ್ಲಿ ತೆಗೆದುಕೊಳ್ಳಲಾಯಿತು.

ಮಲ್ಲಿಗೀ..... ನೀ ಹೊರಟದ್ದೀಗ ಎಲ್ಲಿಗೀ.....

—ಡಾ. ಪ್ರೀತಿ ಶುಭಚಂದ್ರ

'ಸ್ತ್ರೀವಾದ' – ಇಂದು ಎಲ್ಲ ಪರ–ವಿರೋಧಗಳ ನಡುವೆಯೂ ಹೆಚ್ಚು ಚಲಾವಣೆಯಲ್ಲಿರುವ, ಚರ್ಚಿಸಲಾಗುತ್ತಿರುವ ಸಾಹಿತ್ಯಿಕ ಸಾಂಸ್ಕೃತಿಕ ವಾಗ್ವಾದವಾಗಿದೆ. ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಸ್ತ್ರೀವಾದದ ತಾತ್ವಿಕ ಚರ್ಚೆ ಅತ್ಯಂತ ಗಂಭೀರವಾದ ಕ್ರಮಬದ್ಧವಾದ ಅಧ್ಯಯನದ ಶಿಸ್ತಿನಲ್ಲಿ ನಡೆಯುತ್ತಿದೆ. ಅದರೊಂದಿಗೇ ಅಸ್ಪಷ್ಟ ಪೂರ್ವಾಗ್ರಹಗಳೊಂದಿಗೆ, ಯಾವುದೇ ಖಚಿತ ತಾತ್ವಿಕ ದೃಷ್ಟಿಕೋನವಿಲ್ಲದೆ ಸ್ತ್ರೀವಾದಿ ಅಧ್ಯಯನವನ್ನು ಮಂಕುಮಾಯೆಗೆ ಒಳಪಡಿಸುವ ಪ್ರಯತ್ನಗಳೂ ಇಲ್ಲದಿಲ್ಲ. ಈ ಎರಡನೇ ಬಗೆಯ ಪ್ರಯತ್ನ ಅತ್ಯಂತ ಅಪಾಯಕಾರಿಯೂ ಹಾಸ್ಯಾಸ್ಪದವೂ ಆಗಿದೆ. ಹೇಗೆಂದರೆ, ನಿಸಾರ್ ಅಹಮದ್‌ರ ಕವನವೊಂದರ ನವನಾಗರಿಕ ಹೆಣ್ಣು ನಮ್ಮಮ್ಮನ ಬುರುಖಾ, ತೊಟ್ಟಂತೆ! ಇಂಥ ಪ್ರಯತ್ನಗಳ ಪ್ರಾತಿನಿಧಿಕವಾಗಿ ಶ್ರೀಮತಿ ಸವಿತಾ ನಾಗಭೂಷಣ ಅವರು ಸಂಪಾದಿಸಿರುವ 'ಮುಡಿ ಮಲ್ಲಿಗೆ'ಯ ಸಂಪಾದಕೀಯ ಲೇಖನ ಗಮನಾರ್ಹವಾಗಿದೆ. (ಮುಡಿ ಮಲ್ಲಿಗೆ', ಸಂ. ಸವಿತಾ ನಾಗಭೂಷಣ, ಸಂವಾದ ಪ್ರಕಾಶನ, ಮಲ್ಲಾಡಿಹಳ್ಳಿ. 1993).

ಕನ್ನಡ ಮಹಿಳಾ ಸಾಹಿತ್ಯದ ಸ್ಪಂದನಗಳನ್ನು ಸ್ತ್ರೀವಾದಿ ನೆಲೆಯಿಂದ ದಾಖಲಿಸುವ ಗಂಭೀರ ಪ್ರಯತ್ನದ ಲೇಖನಗಳು ಈ ಸಂಪಾದಿತ ಕೃತಿಯಲ್ಲಿವೆ. 'ಸ್ತ್ರೀವಾದಿ ದೃಷ್ಟಿಕೋನ'ದ ತಾತ್ತ್ವಿಕ ವಿವೇಚನೆಯನ್ನು ನೇಮಿಚಂದ್ರರ ಲೇಖನ ಚೊಕ್ಕವಾಗಿ ಮಾಡಿದೆ. ಸ್ತ್ರೀವಾದದ ಪ್ರಸ್ತುತತೆಯನ್ನು ಮಧ್ಯಮ ವರ್ಗೀಯ ಹಿನ್ನೆಲೆಯಲ್ಲಿ ನೇಮಿಚಂದ್ರ ಹೀಗೆ ಅರ್ಥೈಸುತ್ತಾರೆ :

"ಆರ್ಥಿಕ ಅನಿವಾರ್ಯತೆಗೋ, ಬೌದ್ಧಿಕ ತೃಪ್ತಿಗೋ ಹೊರಗೆ ದುಡಿಯ ಹೊರಟ ಹೆಣ್ಣುಗಳೂ ಕೂಡ, ಅಡಿಗೆ – ಮನೆಗೆಲಸ – ಮಕ್ಕಳ ಲಾಲನೆ ಎಲ್ಲವೂ ತಮ್ಮೊಬ್ಬರಿಗೇ ಸೇರಿದ ಜವಾಬ್ದಾರಿಯೆಂಬ ನಂಬುಗೆಯಲ್ಲಿ ಇಬ್ಬಗೆಯ ಹೊರೆ ಹೊತ್ತು ಒದ್ದಾಡುತ್ತಾರೆ. ಪುರುಷನೇಕೆ ಸಹಭಾಗಿಯಾಗಬಾರದು ಎಂದು ಪ್ರಶ್ನಿಸಲೂ ಭಯ. ಆಧುನಿಕ ಬದುಕಿನ ಅನಿವಾರ್ಯಗಳಲ್ಲಿ ಸ್ತ್ರೀಯು ಸಾಂಪ್ರದಾಯಿಕ ಪಾತ್ರಕ್ಕೆ ಸೀಮಿತವಾಗಲಾರದ ಸೀಮಿತವಾಗಬೇಕಿಲ್ಲದ ಇಂದಿನ ಸಕ್ರಮಣ ಸ್ಥಿತಿಯಲ್ಲಿ 'ಸ್ತ್ರೀವಾದ' ಮಹಿಳೆಗೆ, ಮಹಿಳೆಯ ನಿಜ ವ್ಯಕ್ತಿತ್ವವನ್ನು ಪರಿಚಯಿಸ ಹೊರಟಿದೆ."

ಕಾದಂಬರಿ, ಕತೆ, ಕಾವ್ಯ – ಈ ಮೂರು ಸಾಹಿತ್ಯ ಪ್ರಕಾರಗಳಲ್ಲಿನ ಮಹಿಳೆಯರ ಕೊಡುಗೆ, ಸಾಧನೆ, ಬೆಳವಣಿಗೆಗಳನ್ನು ವಿಜಯಶ್ರೀ ಸಬರದ, ಸುಮಿತ್ರಾಬಾಯಿ ಬಿ. ಎನ್. ಹಾಗೂ ಚೆನ್ನಕ್ಕ ಎಲಿಗಾರ ಅವರು ಅನುಕ್ರಮವಾಗಿ ತಮ್ಮ ಲೇಖನಗಳಲ್ಲಿ ಸವಿವರವಾಗಿ ವಿವೇಚಿಸಿದ್ದಾರೆ. ಆಧುನಿಕ ಕನ್ನಡ ಸಾಹಿತ್ಯ ವಿಮರ್ಶೆಯಿಂದ ಗೌಣವಾಗಿ, ಅಂಚಿಗೆ ಸರಿಸಲ್ಪಟ್ಟ ಮಹಿಳಾ ಸಾಹಿತ್ಯವನ್ನು ಪ್ರತ್ಯೇಕ ಸಾಹಿತ್ಯ ಪರಂಪರೆಯಲ್ಲಿ ಸ್ಥಾಪಿಸುವ ಪ್ರಯತ್ನವನ್ನು ಈ ಲೇಖನಗಳು ಮಾಡುತ್ತವೆ. ಕಥಾ ಸಾಹಿತ್ಯದಲ್ಲಿನ ಮಹಿಳೆಯ ಸಾಧನೆಗಳ ಇತಿ – ಮಿತಿಗಳನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಿಸುವ ಪ್ರಯತ್ನವನ್ನು ಬಿ. ಎನ್. ಸುಮಿತ್ರಾಬಾಯಿ ಮಾಡಿದ್ದಾರೆ. "ಭಕ್ತ ಕವಯಿತ್ರಿಯರು" — ಮಧುಕಿಶ್ವಾರ್‌ರವರಿಂದ ಸಂಪಾದಿತವಾದ ಇಂಗ್ಲೀಷ್ ಪುಸ್ತಕವನ್ನು ಕುರಿತ ಜಿ. ರಾಜಶೇಖರರವರ ಪರಿಚಯಾತ್ಮಕ ಲೇಖನ.

ಈ ಸಂಕಲನದ ಮತ್ತೊಂದು ಮಹತ್ವದ ಭಾಗ ಎಂದರೆ ಸೃಜನಶೀಲ ಲೇಖಕಿಯರು ತಮ್ಮ ಸೃಜನಶೀಲತೆಯ ಸಾಮಾಜಿಕ, ಸಾಹಿತ್ಯಕ, ಸಾಂಸ್ಕೃತಿಕ ಪ್ರೇರಣೆಗಳನ್ನು ದಾಖಲಿಸುವ ಲೇಖನಗಳು. ವಿಜಯಾರವರ ಲೇಖನ 'ಬೀದಿ ನಾಟಕ'ದ ಅನುಭವಗಳನ್ನು ಅತ್ಯಂತ ನಿರುದ್ವಿಗ್ನ ಶೈಲಿಯಲ್ಲಿ ಹೇಳುತ್ತಾ ಹೋಗುತ್ತದೆ. ಹೊಸ ಪ್ರಕಾರದಲ್ಲಿ ತಮ್ಮನ್ನು ತೊಡಗಿಸಿಕೊಂಡ ವಿಜಯಾ ಬದುಕಿನ ಅನ್ವೇಷಣೆಗೆ ಮಾಧ್ಯಮವಾಗಿಯೂ ಅದನ್ನು ಬಳಸಿಕೊಂಡದ್ದು ವಿಶಿಷ್ಟವಾಗಿದೆ. "ಹೀಗೆ....

ಬೀದಿ ನಾಟಕಗಳ ಮೂಲಕ ನಾನು ನಿಜ ಬದುಕಿನ ಬೀದಿಗಿಳಿದಿದ್ದೆ....". ಕನ್ನಡ ಮಹಿಳಾ ಸಾಹಿತ್ಯಕ್ಕೆ ಮುಸ್ಲಿಂ ಸಂವೇದನೆಯ ಆಯಾಮ ಕಲ್ಪಿಸಿದ ಮಹತ್ವದ ಕಾದಂಬರಿಕಾರ್ತಿ ಸಾರಾ ಅಬೂಬಕ್ಕರ್ ತಮ್ಮ ಕೆಲವು ಸ್ತ್ರೀಪಾತ್ರಗಳ ಸೃಷ್ಟಿಗೆ ಕಾರಣವಾದ ಸನ್ನಿವೇಶಗಳನ್ನು ತಮ್ಮ ಲೇಖನದಲ್ಲಿ ನಿರೂಪಿಸಿದ್ದಾರೆ. ಕವಿತೆಯ ಮೂಲಕ ಬರವಣಿಗೆಗೆ ಕಾಲಿಟ್ಟ ಭಾಗೀರಥಿ ಹೆಗಡೆಯವರು ಕತೆಗಾರ್ತಿ ಆದ ಸಂದರ್ಭ, ಪ್ರೇರಣೆಗಳು ಸೃಜನಶೀಲತೆಯ ರಹಸ್ಯದ ಬಗೆಗಿನ ಬೆರಗಿನಲ್ಲಿ ನಿರೂಪಿತಗೊಂಡಿದೆ. ಹಾಗೆಯೇ ಸ. ಉಷಾರವರ ಲೇಖನ, 'ಕವಿತೆಯ ಮಾಯೆ'ಯ ಹಿಂದಿರುವ ರಹಸ್ಯವನ್ನು ಸ್ವಾನುಭವದ ಅಗ್ನಿಪರೀಕ್ಷೆಯ ತಪಸ್ಸಿನ ಮೂಲಕ ಭೇದಿಸಬಲ್ಲ ಹಂಬಲವನ್ನು ಹೊತ್ತಿದೆ.

ಕೊನೆಯಲ್ಲಿ, ಸ್ತ್ರೀಯ ಲೋಕದೃಷ್ಟಿಯನ್ನು ಬಿಂಬಿಸುವ ಐದು ಪ್ರಾತಿನಿಧಿಕ ಗದ್ಯಭಾಗಗಳನ್ನು ನೀಡಿರುವುದು ಪುಸ್ತಕದ ಉಪಯುಕ್ತತೆಯನ್ನು ಹೆಚ್ಚಿಸಿದೆ.

ಒಟ್ಟಿನಲ್ಲಿ ಸಂಪಾದಕರು ಅಚ್ಚುಕಟ್ಟಾಗಿ ಲೇಖನಗಳನ್ನು ಸಂಪಾದಿಸಿದ್ದಾರೆ. ಅಲ್ಲಲ್ಲಿ, ಇತರ ಲೇಖಕರ ಮಹತ್ವದ ವಿಮರ್ಶೆಯ ಮಾತುಗಳನ್ನು ಟಿಪ್ಪಣಿಯ ರೂಪದಲ್ಲಿ ಕೊಟ್ಟಿದ್ದಾರೆ. ಆದರೆ ಸಂಪಾದಕೀಯ ಲೇಖನದ ಭಾಗಕ್ಕೆ ಬಂದಾಗ ಮಾತ್ರ ಸಂಪಾದಿತ ಲೇಖನಗಳ ಹಿಂದಿನ ಸ್ತ್ರೀವಾದಿ ಆಶಯವನ್ನು ಅವರು ಅರ್ಥೈಸಿಕೊಳ್ಳುವಲ್ಲಿ ಸೋತಿದ್ದಾರೆಯೆ ಎಂಬ ಪ್ರಶ್ನೆ ಮೂಡುತ್ತದೆ. ರಾಮಕೃಷ್ಣ ಪರಮಹಂಸರ ತಿಂಡಿಪೋತತನದ ಕತೆಯೊಂದನ್ನು ಪ್ರಸ್ತಾಪಿಸುತ್ತಾ ಸಂಪಾದಕಿ ಕೇಳುವ ಪ್ರಶ್ನೆ ಅತ್ಯಂತ ಮುಗ್ಧವಾಗಿದೆ : "ಅಡಿಗೆ ಮಾಡುವವಳಿಗೆ ದೇವರನ್ನೇ ಕಾಣಿಸುವ ಶಕ್ತಿ ಇರುವುದಾದರೆ ಕಿಂಚಿತ್ ಸಾಹಿತ್ಯವನ್ನು ಉಣಬಡಿಸುವ ಸಾಮರ್ಥ್ಯವಿಲ್ಲವೆ ?" ಆದರೆ ಈ ಮುಗ್ಧ ಪ್ರಶ್ನೆಯನ್ನು ಆಧ್ಯಾತ್ಮಿಕ ಪ್ರತೀಕವಾಗಿ ಬಳಸಿಕೊಳ್ಳುತ್ತಾರೆ, "ಪ್ರಕೃತಿ – ಪುರುಷ ಸಂಬಂಧವನ್ನು ಅದರ ಸಮಸ್ತ ಗೂಢತೆ ಗಾಢತೆಯೊಂದಿಗೆ ಬಿಂಬಿಸುವ" ಪ್ರಯತ್ನಗಳಾಗಿ 'ಅಡಿಗೆ ಮನೆ ಸಾಹಿತ್ಯ'ವನ್ನು ಅವರು ನೋಡಿದ್ದಾರೆ.

ಸೃಜನಶೀಲ ಪ್ರೇರಣೆಯ ಸೆಲೆಯಾಗಿ 'ಅಡಿಗೆ ಮನೆ'ಯ ಖಾಸಗಿ ಅನುಭವ ವಲಯ ಮುಖ್ಯವಾದುದು ನಿಜ. ಆದರೆ ಪ್ರೇರಣೆಯ ಇತರ ಅನಂತ ಸಾಧ್ಯತೆಗಳನ್ನೆಲ್ಲಾ ನಿರಾಕರಿಸಿ 'ಅಡಿಗೆ ಮನೆ'ಗೆ ಮಾತ್ರ ಪಟ್ಟ ಕೊಟ್ಟಾಗ ಹುಟ್ಟುವ ಸಾಹಿತ್ಯಮೀಮಾಂಸೆ ಹೇಗಿರುತ್ತದೆ ಎಂಬುದಕ್ಕೆ ಸಂಪಾದಕರ ಮಾತುಗಳು ನಿರ್ದೇಶನ ಒದಗಿಸುತ್ತವೆ.

ಅಡಿಗೆ ಮನೆ ಬಿಟ್ಟು ಹೊರಬರುತ್ತಿರುವ ಸಂದರ್ಭದಲ್ಲಿಯೇ ಅದರ ಮಹತ್ವವನ್ನು ಅರಿಯುತ್ತಿರುವುದಾಗಿ ಸವಿತಾ ಭಾವಿಸಿದ್ದಾರೆ. ಈ ಭಾವನೆಗೆ ಬಹುಶಃ ಎರಡು ಪ್ರಬಲ ಕಾರಣಗಳಿವೆ. ಮೊದಲನೆಯದು ಸ್ತ್ರೀವಾದದ ಬಗೆಗೆ, ಮಹಿಳಾ ಸಾಹಿತ್ಯದ ಬಗೆಗೆ ಪುರುಷದೃಷ್ಟಿಕೋನದ ಮಿತಿಯಿಂದ ಹುಟ್ಟಿಕೊಂಡ ಪೂರ್ವಾಗ್ರಹಗಳು. ಮಹಿಳಾ ಸಾಹಿತ್ಯವನ್ನು ವಿಮರ್ಶಿಸುವ ಸಂದರ್ಭದಲ್ಲಿ ಕೆಲವು ಪುರುಷ ವಿಮರ್ಶಕರು ಸ್ತ್ರೀಸಂವೇದನೆಯ ಅನನ್ಯತೆಯನ್ನು ವಿಮರ್ಶೆಯ ಅಪೇಕ್ಷಣೀಯ ಅಂಶವಾಗಿಟ್ಟುಕೊಂಡಿದ್ದಾರೆ. ಆದರೆ ಸ್ತ್ರೀಸಂವೇದನೆಯ ಅನನ್ಯತೆಯ ಬಗೆಗಿನ ಅವರ ಪರಿಕಲ್ಪನೆ ಮಾತ್ರ ಪರಿಮಿತವಾದುದು. ಮಹಿಳೆಯೊಬ್ಬಳ ದೈನಂದಿನ ಕೌಟುಂಬಿಕ ಅನುಭವ ವಿವರಗಳು, ತಾಯ್ತನ, ಬಸಿರು, ವಿರಹ, ಪ್ರೇಮ – ಈ ಚೌಕಟ್ಟಿನ ಒಳಗಿನ ಸಂವೇದನಾಶೀಲತೆಯನ್ನು ವ್ಯಕ್ತಪಡಿಸುವ ಉಪಮೆ, ರೂಪಕ, ಪ್ರತಿಮೆಗಳನ್ನು ಉಲ್ಲೇಖಿಸಿ ಮಹಿಳೆಯ 'ಅನನ್ಯ'ತೆಯ ಮಾದರಿ ಎಂದು ಕೊಂಡಾಡುವ ಉದಾರವಾದಿ ವಿಮರ್ಶೆ ಸಾಕಷ್ಟು ಬಂದಿದೆ. ವಿಮರ್ಶಕ ಡಿ. ಆರ್. ನಾಗರಾಜರು ಇದಕ್ಕೊಂದು ಸೈದ್ಧಾಂತಿಕ ರೂಪವನ್ನು ಕೊಟ್ಟು 'ಗೃಹವಾದಿನಿ' ಮಾದರಿಯನ್ನು ಸ್ಥಾಪಿಸುತ್ತಾರೆ. ('ಸ್ತ್ರೀವಾದಿ ಸಾಹಿತ್ಯ ಮೀಮಾಂಸೆಯ ಸ್ವರೂಪ : ಸಮಸ್ಯೆಗಳು – ಸಾಧ್ಯತೆಗಳು', ಡಾ. ಡಿ. ಆರ್. ನಾಗರಾಜ್, ಭಾರತೀಯ ಸ್ತ್ರೀವಾದ, ಸಂ. ಎಸ್. ಮನುಚಕ್ರವರ್ತಿ, ಅಕ್ಷರ ಪ್ರಕಾಶನ, ಸಾಗರ, 1993)

ಗೃಹವಾದಿನಿ ಮಾದರಿಗೆ ಪ್ರತಿಯಾಗಿ ಪರಂಪರೆಯನ್ನು ಪ್ರಶ್ನಿಸುವ, ಪ್ರತಿಭಟಿಸುವ 'ಬ್ರಹ್ಮವಾದಿನಿ' ಮಾದರಿಯನ್ನು ನಿಲ್ಲಿಸಿ ಇವೆರಡರ ಮೇಳೈಸುವಿಕೆಯಲ್ಲಿ ಅತ್ಯುತ್ತಮ ಸಾಹಿತ್ಯವಿದೆ ಎಂಬ ಅಭಿಪ್ರಾಯಕ್ಕೆ ಅವರು ಬರುತ್ತಾರೆ. ಇದುವರೆಗಿನ ಸಾಹಿತ್ಯದಲ್ಲಿ ಈ ಎರಡು ರೀತಿಯ ಮಾದರಿಗಳಿರುವುದನ್ನು ಯಾರೂ ಒಪ್ಪಬಹುದು. ಆದರೆ ಸಾಹಿತ್ಯದ ಶ್ರೇಷ್ಠತೆಯ ಮಾನದಂಡ

ವಾಗಿ ಇವೆರಡೂ ಮಾದರಿಗಳ ಸೇರುವಿಕೆ ಅತ್ಯಗತ್ಯ ಎಂದಾಗ ವರ್ತಮಾನದ, ಭವಿಷ್ಯದ ಮಹಿಳಾ ಸಾಹಿತ್ಯ ಸೃಷ್ಟಿಯನ್ನು ದೊಡ್ಡ ಸೀಮಿತತೆಯಲ್ಲಿ ಬಂಧಿಸಿದಂತಾಗುತ್ತದೆ. ಮಹಿಳಾ ಸಮಸ್ಯೆಯನ್ನು ಮೂಲಭೂತವಾಗಿ ಸಾಹಿತ್ಯವನ್ನೂ ಮೀರಿದ ಚಾರಿತ್ರಿಕ ಗತಿಯ ಸಾಂಸ್ಕೃತಿಕ ಸಂದರ್ಭದಲ್ಲಿಟ್ಟು ನೋಡಿದಾಗ ಗೃಹವಾದಿನಿ ಮಾದರಿ ಅಪೇಕ್ಷಣೀಯ ಮಾದರಿಯಾಗಿ ಉಳಿಯಬೇಕೆನ್ನುವುದು ಪ್ರತಿಗಾಮಿ ವಿಚಾರವಾಗುತ್ತದೆ. ತಮ್ಮ ಬ್ರಹ್ಮಜ್ಞಾನದ ಅರಿವಿನ ಸ್ಫೋಟದಿಂದ ಗೃಹವಾದಿನಿ ಚೌಕಟ್ಟನ್ನು ಮೀರುವ ಪ್ರಕ್ರಿಯೆಯ ಚಾರಿತ್ರಿಕ ಆಯಾಮ ಇಲ್ಲಿ ಮುಖ್ಯವಾಗುತ್ತದೆ. ಹಾಗಾಗಿ ಶ್ರೇಷ್ಠ ಸಾಹಿತ್ಯದ ಬಗೆಗಿನ ಈ ಮೀಮಾಂಸೆ ಚಾರಿತ್ರಿಕ ಆಯಾಮವನ್ನು ಸ್ಪರ್ಶಿಸುವುದಿಲ್ಲವಾದ ಕಾರಣ ಮಹಿಳಾ ಸಾಹಿತ್ಯ ಅಧ್ಯಯನದಮಟ್ಟಿಗಂತೂ ನಿರುಪಯುಕ್ತವೇ ಸರಿ. ಸವಿತಾರವರು 'ಅಡುಗೆ ಮನೆ'ಯನ್ನು ಸಂಭ್ರಮಿಸುವುದಕ್ಕೆ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಇಂಥ ಮೀಮಾಂಸೆಗಳೂ ಕಾರಣ.

ಈ 'ಅಡಿಗೆ ಮನೆ'ಯ ವೈಭವೀಕರಣ ಅನುಭವದ ವ್ಯಾಪಕತೆಯನ್ನು ಮಹಿಳೆಯ ಮಟ್ಟಿಗೆ ಕುಗ್ಗಿಸುವಂಥದು. "ಅಡಿಗೆ ಮನೆ ಬಿಟ್ಟು ಹೊರಬರುತ್ತಿರುವ ನಾವು ಹೋಗುತ್ತಿರುವುದಾದರೂ ಎಲ್ಲಿಗೆ ? ನಲ್ಲಿಯ ಮುಂದೆ, ಸೀಮೆಎಣ್ಣೆ ಡಬ್ಬ ಹಿಡಿದು ಅಂಗಡಿಯ ಮುಂದೆ.... ಇದರಿಂದ ಪಡೆದದ್ದಕ್ಕಿಂತ ಕಳಕೊಂಡಿದ್ದೆ ಹೆಚ್ಚು ಅನ್ನಿಸುವ ಪರಿಸ್ಥಿತಿ : ಒಳಗೂ – ಹೊರಗೂ ದುಡಿತ; ಜೊತೆಗೆ ಹಿಂದೆ ಇದ್ದ ಅಲ್ಪಸ್ವಲ್ಪ ಆರಾಮದಲ್ಲೂ ಕಡಿತ....". ಈ ಸ್ಥಿತಿಯು ಬಿಡುಗಡೆ ಎಂಬ ಮರೀಚಿಕೆ ನಮ್ಮಿಂದ ಬೇಡುತ್ತಿರುವ ಕಿಂಚಿತ್ ಲಂಚವೇ ಇರಬಹುದು ಎಂದು ಅವರಿಗೆ ಎನಿಸುತ್ತದೆ. ಹೀಗೆ ದುಡಿಮೆಯ ಜವಾಬ್ದಾರಿಯಿಂದ ತನ್ನನ್ನು ಮುಕ್ತಗೊಳಿಸಿಕೊಳ್ಳುವ ನಗರ ಸಂಸ್ಕೃತಿಯ ಹಿನ್ನೆಲೆಯೂ ಅಡಿಗೆ ಮನೆ ಬಿಟ್ಟು ಬರಲು ಹಿಂಜರಿಯುವುದಕ್ಕೆ ಎರಡನೇ ಕಾರಣವಾಗಿರಬಹುದು.

ಇದೇ ರೀತಿಯ ಹಿಂಜರಿಕೆ ಸ್ತ್ರೀ – ಪುರುಷ ಸಂಬಂಧದ ಬಗೆಗಿನ ಅವರ ಈ ನಿಲುವಿನಲ್ಲಿದೆ. "ಸಮಾನತೆ ಎನ್ನುವುದು ಎಂದಾದರೂ ಸಾಧಿಸಲ್ಪಡಬಹುದಾದ ಸ್ಥಿತಿಯೇ ? ಅದು ಎಷ್ಟಾದರೂ ಏತ – ದೂತದ ಆಟವೇ ಸರಿ. ಏತ – ದೂತ, ದೂತ – ಏತ ಆಗಬಹುದಷ್ಟೇ. ಪರಸ್ಪರ ಪ್ರೀತಿಯ ಭಾವ ಮಾತ್ರ ಈ 'ನಾನು ನೀನು' ಎಂಬ ಭಾವ ಕರಗಿಸಬಲ್ಲುದು. ಯಾಕೊ.... ಇದು ಗುರಿಯಿಲ್ಲದ ನಡಿಗೆ, ಉತ್ತರವಿಲ್ಲದ ಪ್ರಶ್ನೆಯೆಂದೇ ಭಾಸವಾಗುತ್ತಿದೆ." ಹೀಗೆಯೇ ಮಹಿಳಾ ಸಾಹಿತ್ಯವನ್ನು ಪುರುಷ ಸಾಹಿತ್ಯದ ಹಿಡಿತದಲ್ಲಿ ಇರುವಂತೆ ತೋರುವ ಗಾಳಿಪಟಕ್ಕೆ ಸವಿತಾ ಹೋಲಿಸುತ್ತಾರೆ. ಈ ಗಾಳಿಪಟದ ಹೋಲಿಕೆ ಎಷ್ಟು ಅಪಾಯಕಾರಿ ಎಂದರೆ ಇಡೀ ಮಹಿಳಾ ಸಾಹಿತ್ಯದ ಸೃಜನಶೀಲತೆಯ ಅನಂತ ಸಾಧ್ಯತೆಗಳನ್ನೆಲ್ಲಾ ನಿರ್ಲಕ್ಷಿಸಿ, ಬಂಧಿತ ಸ್ಥಿತಿಯಲ್ಲಿಡುವಂಥದು. ಸೂತ್ರಧಾರನಿಂದ ಸ್ವತಂತ್ರವಾಗಿ ಮೇಲೇರಿ ಹಾರ ಬಯಸುವ ಗಾಳಿಪಟದ ಅವಸ್ಥೆ ಎಂಥದ್ದೆಂಬುದನ್ನು ಅವರ ಬಾಯಿಂದಲೇ ಕೇಳೋಣ ! : "ಗಾಳಿಪಟ ಯಾವುದೋ.... ಮರಕ್ಕೆ ಸಿಕ್ಕಿ ಹಾಕಿಕೊಳ್ಳಬಹುದು, ಯಾವುದೊ ಮುಳ್ಳುಕಂಟಿಗೆ ತಗುಲಿಕೊಂಡು ಹರಿದು ಹೋಗಲೂಬಹುದು, ನದಿಗೆ ಬಿದ್ದು ಒದ್ದೆಯಾಗಲೂ ಬಹುದು....". ಅಂತಿಮವಾಗಿ ಈ ಅವಸ್ಥೆಗಳನ್ನೆಲ್ಲಾ ದಾಟಿದ ಗಾಳಿಪಟ ಸೂತ್ರಧಾರನ ಬಳಿಹೋಗಿ "ಈಗ ನೀನು ಗಾಳಿಪಟವಾಗು. ಗಾಳಿಯೊಂದಿಗೆ ತೇಲಿ ಹೋಗಿ.... ನೋಡು" ಎಂದು ತಾನೇ ಸೂತ್ರ ಹಿಡಿಯಲೂ ಬಹುದಂತೆ. ಗಾಳಿಪಟಕ್ಕೆ ಕೊಟ್ಟ ಈ ಈ ಸ್ವಾತಂತ್ರ್ಯದ ದುಷ್ಪರಿಣಾಮದ ಬಗೆಗೆ ಸಂಪಾದಕಿಯ ಕಳಕಳಿ ಅಪಾರ : "ಸದ್ಯ ಶೋಷಣೆಗಳೊಳಪಡುತ್ತಿರುವವಳು ಮುಂದೊಂದು ದಿನ ಶೋಷಕಿಯ ಸ್ಥಾನ ಅಲಂಕರಿಸಬೇಕಾಗಿ ಬಂದರೆ ಅದೆಂಥ ಗೆಲುವು ?" ಹಾಗಾದ ಘಟನೆಗಳೇ ಚರಿತ್ರೆಯಲ್ಲೂ ವರ್ತಮಾನದಲ್ಲೂ ಹೆಚ್ಚಂತೆ ! ಆದ್ದರಿಂದ ಸ್ತ್ರೀ ಶೋಷಣೆಯ ಯಥಾಸ್ಥಿತಿವಾದವನ್ನು ಒಪ್ಪಿಕೊಳ್ಳಲೂ ಆಗದ, ಬಂಧಮುಕ್ತ ಸ್ವಾತಂತ್ರ್ಯದ ಆದರ್ಶವನ್ನು ಕಲ್ಪಿಸಿಕೊಳ್ಳಲೂ ಆಗದ ಮಧ್ಯದಲ್ಲೆಲ್ಲೋ ಸವಿತಾ ನಿಂತುಬಿಡುತ್ತಾರೆ. ಬದಲಾವಣೆಯ ಸಾಧ್ಯತೆಗಳು ಇನ್ನೂ ಎಚ್ಚರ, ಪ್ರತಿಭಟನೆ, ಹೋರಾಟದ ಹಂತದ ಕಷ್ಟದ ಹಾದಿಯಲ್ಲಿರುವಾಗ, ಮಹಿಳೆಯೂ ಶೋಷಕಿಯಾಗಿಬಿಡುವ ಎಚ್ಚರಿಕೆಯ ಪ್ರಶ್ನೆಯನ್ನು ಅತಿಯಾಗಿ ವೈಭವೀಕರಿಸುವುದು ಬೇಡ. ಮಹಿಳಾ ಹೋರಾಟದ ಕಾವನ್ನು ಅನೇಕ ರೀತಿಯಲ್ಲಿ ದಮನಗೊಳಿಸಲಾಗು

ತ್ತಿರುವ ಪ್ರಯತ್ನಗಳಲ್ಲಿ ಇದೂ ಒಂದು ಸೇರ್ಪಡೆಯಾಗುವ ಅಪಾಯವಿದೆ, ಇಂಥ ಅಪಾಯಗಳ ನಡುವೆ ಕೆಲಸ ಮಾಡುವ ಯಾರೇ ಆಗಲಿ ಮೈಯೆಲ್ಲಾ ಕಣ್ಣಾಗಿಸಿಕೊಳ್ಳಬೇಕಾಗುತ್ತದೆ. ಸಂಪಾದನೆ, ವಿಮರ್ಶೆ, ಸೃಜನಶೀಲ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವಾಗ ತಾತ್ತ್ವಿಕ ವಿಚಾರಗಳಿಂದ ಹಿಡಿದು ದಿನನಿತ್ಯದ ಭಾಷಾಬಳಕೆಯ ಬಗೆಗೆ ಕೂಡ ಸೂಕ್ಷ್ಮ ಎಚ್ಚರವಹಿಸಬೇಕಾಗುತ್ತದೆ.

ಸ್ತ್ರೀ ವಿರೋಧಿ ಧೋರಣೆಗಳು ಬಹಳ ಸೂಕ್ಷ್ಮವಾಗಿ ನಮ್ಮ ದಿನಬಳಕೆಯ ಭಾಷಾ ವ್ಯಾಪಾರದಲ್ಲಿ ಕಾಣಿಸಿಕೊಳ್ಳುತ್ತವೆ. ಸ್ತ್ರೀಪುರುಷ ಸಂಬಂಧವನ್ನು ಸ್ಥಿರೀಕರಿಸುವ ಕೆಲ ಸಿದ್ಧಉಪಮೆ ರೂಪಕಗಳ ಒಳಕೆ ನಮ್ಮಲ್ಲಿ ಇವೆ. ಹೂ – ದುಂಬಿ, ನದಿ – ಸಾಗರ, ವೀಣೆ – ವೈಣಿಕ, ಲತೆ – ಮರ, ಮಲ್ಲಿಗೆ – ಮಾಮರ.... ಇತ್ಯಾದಿ. ಈ ಹೋಲಿಕೆಗಳ ಸೌಂದರ್ಯಾತ್ಮಕ ಉಪಯುಕ್ತತೆಗಿಂತ ಸ್ತ್ರೀಯನ್ನು ಅಸಮಾನತೆಯ ನೆಲೆಗೆ ದೂಡುವಲ್ಲಿ ಅವು ವಹಿಸುವ ಪಾತ್ರ ಗಮನಾರ್ಹವಾದುದು. ಹೆಣ್ಣನ್ನು ಮಲ್ಲಿಕಾಲತೆ ಎಂದೂ ಈ ಗಂಡನ್ನು ಮಾಮರವೆಂದೂ ಹೋಲಿಸಿ ಸಂಬಂಧ ಕಲ್ಪಿಸಿದಾಗ, ನಿರ್ದಿಷ್ಟ ಸಾಮಾಜಿಕ ಚೌಕಟ್ಟಿನಲ್ಲಿನ ಹೆಣ್ಣಿನ ಹಾಗೂ ಗಂಡಿನ ಸ್ಥಾನಮಾನವನ್ನೂ ಈ ಹೋಲಿಕೆ ನಿರ್ದೇಶಿಸುತ್ತಿರುತ್ತದೆ. ಭದ್ರವಾಗಿ ನಿಲ್ಲಬಲ್ಲ ಮರವು ಗಂಡಿನ ದೈಹಿಕ ಸಾಮರ್ಥ್ಯವನ್ನೂ ಬಳಕುತ್ತ ಮರಕ್ಕೆ ಸುತ್ತುವ ಲತೆಯು ಹೆಣ್ಣಿನ ಪರಾವಲಂಬಿತ ಸ್ಥಿತಿಯನೂ ಸೂಚಿಸುವಂತಹದು, ಇಷ್ಟೇ ಅಲ್ಲ, ಒಂದು ಮರ ಹಲವಾರು ಲತೆಗಳಿಗೆ ಏಕಕಾಲಕ್ಕೆ ಆಶ್ರಯ ನೀಡಬಲ್ಲದು. ಅದೇ ಲತೆಯಾದರೋ ಮರವನ್ನು ಅರ್ಧ ಸುತ್ತಿ ನಿಂತು ಬೇಸರವಾಯಿತೆಂದು ಬೇರೊಂದು ಮರವನ್ನು ಬಳಸಿ ಸುತ್ತುವ ಹಾಗಿಲ್ಲ. ಒಂದು ಸಾಮಾಜಿಕ ಚೌಕಟ್ಟಿನಲ್ಲಿ ಗಂಡಿಗೆ ದೊರಕುವ ರಿಯಾಯಿತಿಗಳನ್ನೂ ಹೆಣ್ಣಿಗೆ ವಿಧಿಸಲಾಗಿರುವ ನಿರ್ಬಂಧಗಳನ್ನು ಇಂಥ ಹೋಲಿಕೆಗಳು ಸ್ಪಷ್ಟವಾಗಿ ಸೂಚಿಸುತ್ತವೆ. ಆದ್ದರಿಂದ, ಮಲ್ಲಿಗೆ – ಮಾಮರ, ಏತ – ದೂತ, 'ಬೆರಳು – ಭಾವ' ಸಂಬಂಧಗಳ ಎಳೆಯನ್ನು ಹಿಡಿದು ಹೊರಟರೆ ಉತ್ತರವಿಲ್ಲದ ಪ್ರಶ್ನೆಗಳೇ ಎದುರಾಗುತ್ತವೆ. ಹೋಲಿಕೆ ನೀಡುವುದಾದರೂ ಅಸಮಾನತೆಯನ್ನು ಬಿಂಬಿಸುವ ಹೋಲಿಕೆಗಳ ಬದಲು ಸಮಾನತೆಯನ್ನು ಸೂಚಿಸಲ್ಲವಂಥವನ್ನು ಹುಡುಕಬಹುದಲ್ಲ. ಏನಿಲ್ಲವೆಂದರೂ ಸೂಜಿ – ದಾರದಂತಹುಗಳನ್ನು. ಕೊನೆಯದಾಗಿ, ಒಂದು ಮಾತು : ತನ್ನನ್ನು ತಾನೇ ಮಲ್ಲಿಗೆ ಎಂದು ಕರೆದುಕೊಳ್ಳುವ ಮಹಿಳೆ ಹೊರಟಿದೆಲ್ಲಿಗೆ ಎನ್ನುವುದು ನಮಗೂ ಒಂದು ಪ್ರಶ್ನೆಯೇ. ಹೊರಟಿದ್ದೇ ನಿಜವಾದರೆ, ಬಂದು ಸೇರಿದ್ದು ಮಾತ್ರ ಹಿಂದಿದ್ದಲ್ಲಿಗೇ ಎನ್ನುವುದು ನಿಜಕ್ಕೂ ಬೇಸರದ ಸಂಗತಿ. ●

ಜಮುನಾಲಾಲ್ ಬಜಾಜ್ ಪ್ರಶಸ್ತಿ ವಿಜೇತೆ —ಗೆಡಾಂಗ್ ಬಾಗೋಸ್ ಓಕಾ

ಇಂಡೋನೇಷ್ಯಾದ ಬಾಲಿ ದ್ವೀಪದಲ್ಲಿ ಜನಿಸಿದ ಓಕಾ (3–10–1921) ಮಹಿಳೆಯರ, ಮಕ್ಕಳ ಏಳಿಗೆಗಾಗಿ ದುಡಿಯುತ್ತಿರುವ ಅಪರೂಪದ ಗಾಂಧಿವಾದಿ ಮಹಿಳೆ. ಗಾಂಧಿಯವರ ಜೀವನ ದರ್ಶನಕ್ಕೆ ಮಾರುಹೋದ ಈಕೆ ಶಾಂತಿಯುತವಾಗಿ ಸ್ವಂತ ಸಂಸ್ಕೃತಿಯ ವೈಶಿಷ್ಟ್ಯ ಬಿಟ್ಟು ಕೊಡದೆ ಪ್ರಗತಿ ಸಾಧಿಸಲು ಗಾಂಧಿವಾದವೊಂದೇ ಮಾರ್ಗ ಎಂದು ನಂಬಿ 'ಬಾಲಿ ಶಾಂತಿ ಸೇನಾ ಪ್ರತಿಷ್ಠಾನ' ಸ್ಥಾಪಿಸಿದರು. ಸರ್ವೋದಯ ತತ್ವಗಳ ಆಧಾರವುಳ್ಳ ಶಾಲೆಗಳು, ಆರೋಗ್ಯ ಕೇಂದ್ರಗಳು, ಕೃಷಿ ಕ್ಷೇತ್ರಗಳು, ನಿಸರ್ಗ ಚಿಕಿತ್ಸಾ ಕೇಂದ್ರಗಳನ್ನು ಈ ಪ್ರತಿಷ್ಠಾನ ನಡೆಸುತ್ತಿದೆ. ವಿವಿಧ ಜನಾಂಗಗಳಿಗೆ ಪ್ರತ್ಯೇಕ ಕಾನೂನುಗಳಿರುವಲ್ಲಿ ಸ್ತ್ರೀಯರಿಗೆ ನ್ಯಾಯ ದೊರೆಯದು. ಶಿಕ್ಷಣದ ಮೂಲಕ ಮಾತ್ರ ವಿಮೋಚನೆ ಸಾಧ್ಯವೆನ್ನುವ ಓಕಾ ಮುಂದಿನ ಶತಮಾನ ಮಹಿಳೆಯರ ಯುಗ ಎಂದು ನಂಬಿದ್ದಾರೆ. 'ಮಹಿಳೆ ಅಹಿಂಸಾ ಮೂರ್ತಿ. ಆದರೆ ಅಬಲೆಯಲ್ಲ, ಎಂಬ ಗಾಂಧಿ ವಾಕ್ಯ ಈಕೆಗೆ ನಂಬಿಕೆಯ ಆಸರೆ.

ಇತ್ತೀಚೆಗೆ ಜಮುನಾಲಾಲ್ ಬಜಾಜ್ ಪ್ರಶಸ್ತಿ ಗಳಿಸಿದ ಓಕಾಗೆ ಅಚಲಾದ ಅಭಿನಂದನೆಗಳು.

ಅಭಿವೃದ್ಧಿಯ ಹೆಜ್ಜೆಯತ್ತ.....

1946 — ಮಹಿಳೆಯರಿಗೆ ಸಮಾನ ಹಕ್ಕುಗಳನ್ನು ನೀಡುವುದನ್ನು ಒತ್ತಾಯಿಸಲು ಯುನೈಟೆಡ್ ನೇಷನ್ಸ್‌ನ ಆರ್ಥಿಕ ಮತ್ತು ಸಾಮಾಜಿಕ ಕೌನ್ಸಿಲ್‌ನಿಂದ 'ಮಹಿಳಾ ಸ್ಥಾನಮಾನ ಕುರಿತ ಸಮಿತಿ'ಯ ಸ್ಥಾಪನೆ.

1947–67 — ಈ ಸಮಿತಿಯಿಂದ ಮಹಿಳೆಯ ವಿರುದ್ಧದ ಎಲ್ಲ ತಾರತಮ್ಯವನ್ನು ನಿವಾರಿಸಲು, ಅಂತರ ರಾಷ್ಟ್ರೀಯ ನೀತಿ ಮತ್ತು ನಿಯಮಗಳನ್ನು ರೂಪಿಸುವುದಕ್ಕಾಗಿ ಮತ್ತು ಇವುಗಳ ವಾಖ್ಯಾನ, ಕಾನೂನುಬದ್ಧವಾಗಿಸುವಿಕೆಯ ಪ್ರಯತ್ನ.

1975 — ★ ಅಂತರರಾಷ್ಟ್ರೀಯ ಮಹಿಳಾ ವರ್ಷ.

★ ಮೆಕ್ಸಿಕೋ ಪಟ್ಟಣದಲ್ಲಿ ಮೊದಲ ಯುನೈಟೆಡ್ ನೇಷನ್ಸ್‌ನ ಜಾಗತಿಕ ಮಹಿಳಾ ಸಮಾವೇಶ. ಚರ್ಚಿಸಲ್ಪಟ್ಟ ಮುಖ್ಯ ವಿಷಯಗಳು :
- ★ ಸಮಾನತೆ
- ★ ಅಭಿವೃದ್ಧಿ
- ★ ಶಾಂತಿ

★ ಯುನೈಟೆಡ್ ನೇಷನ್ಸ್ 1976–85ರನ್ನು ಅಂತರರಾಷ್ಟ್ರೀಯ ಮಹಿಳಾ ದಶಕವೆಂದು ಘೋಷಿಸಿತು.

1979 — ಮಹಿಳೆಯ ವಿರುದ್ಧದ ಎಲ್ಲ ರೀತಿಯ ತಾರತಮ್ಯವನ್ನು ನಿವಾರಿಸುವ ಸಲುವಾಗಿ ಯುನೈಟೆಡ್ ನೇಷನ್ಸ್‌ನ ಜನರಲ್ ಅಸೆಂಬ್ಲಿಯು ಸಮಾವೇಶವನ್ನು ಕರೆಯಿತು.

1980 — ★ ಕೋಪೆನ್ ಹೆಗೆನ್‌ನಲ್ಲಿ ಎರಡನೆಯ ಯುನೈಟೆಡ್ ನೇಷನ್ಸ್‌ನ ಜಾಗತಿಕ ಮಹಿಳಾ ಸಮಾವೇಶ.

★ ವಿಶೇಷವಾಗಿ ಮಹಿಳೆಯರ ವಿರುದ್ಧದ ಕ್ರೌರ್ಯ, ದೌರ್ಜನ್ಯದ ಚರ್ಚೆಯನ್ನು ಕೇಂದ್ರೀಕರಿಸಲಾಯಿತು.

1985 — ನೈರೋಬಿಯಲ್ಲಿ ಮೂರನೆಯ ಯುನೈಟೆಡ್ ನೇಷನ್ಸ್‌ನ ಜಾಗತಿಕ ಸಮಾವೇಶ. 2000ನೇ ಇಸವಿಯೊಳಗೆ ಮಹಿಳೆಯರ ಬೆಳವಣಿಗೆಗೆ ವಿವಿಧ strategies ರೂಪಿಸುವುದು.

1990 — ನೈರೋಬಿ ಸಮಾವೇಶದಲ್ಲಿ ನಡೆದ ನೈರೋಬಿ Forward looking Strategiesನ ಪುನರ್ ಮೌಲ್ಯ.

1993 — ವಿಯನ್ನಾದಲ್ಲಿ ನಡೆದ ಮಾನವ ಹಕ್ಕುಗಳನ್ನು ಕುರಿತ ಜಾಗತಿಕ ಸಮಾವೇಶದಲ್ಲಿ **'ಮಹಿಳೆಯರ ಹಕ್ಕುಗಳನ್ನು ಮಾನವ ಹಕ್ಕು'**ಗಳೆಂದು ತೀರ್ಮಾನಿಸಲಾಯಿತು.

1995 — ಚೀನಾದ, ಬೀಜಿಂಗ್‌ನಲ್ಲಿ ನಾಲ್ಕನೇ ಮಹಿಳಾ ಜಾಗತಿಕ ಸಮಾವೇಶವನ್ನು ಯುನೈಟೆಡ್ ನೇಷನ್ಸ್ ನಡೆಸಲಿದೆ.

ಇಲ್ಲಿ ಚರ್ಚಿಸಲಾಗುವ ಮುಖ್ಯ ವಿಷಯಗಳು : ಅಭಿವೃದ್ಧಿಯಲ್ಲಿ ಮಹಿಳೆಯರ ಪಾತ್ರವನ್ನು ಕುರಿತಂತೆ ವಿಶ್ವ ಸಮೀಕ್ಷೆ ಮತ್ತು ಅದನ್ನು ಕ್ರಿಯಾರೂಪದಲ್ಲಿ ತರಲು ಒಂದು ವೇದಿಕೆಯ ಅಸ್ತಿತ್ವ.

1995 — ಸಾಮಾಜಿಕ ಅಭಿವೃದ್ಧಿ ಕುರಿತ ಶೃಂಗಸಭೆ.

ಕೋಪೆನ್ ಹೆಗನ್, ಡೆನ್‌ಮಾರ್ಕ್‌ನಲ್ಲಿ ಸಾಮಾಜಿಕ ಅಭಿವೃದ್ಧಿಯನ್ನು ಕುರಿತ ಜಾಗತಿಕ ಶೃಂಗಸಭೆ.

ನಾಲ್ಕನೇ ಯುನೈಟೆಡ್ ನೇಷನ್ಸ್ ಮಹಿಳಾ ಸಮಾವೇಶ
ಬೀಜಿಂಗ್, ಸೆಪ್ಟೆಂಬರ್ 1995

ಭಾರತದ ಆದ್ಯತೆಯ ವಿಷಯಗಳು

★ **ಮಹಿಳಾ ಹಕ್ಕುಗಳು :**

— ದೌರ್ಜನ್ಯ
— ಮಿಲಿಟರೀಕರಣ
— ಶಾಂತಿ
— ವಿದ್ಯಾಭ್ಯಾಸದ ಹಕ್ಕು
— ಆದಿವಾಸಿ ಜನಾಂಗ/ದಲಿತ/ಬುಡಕಟ್ಟು ಜನಾಂಗದ ಮಹಿಳೆಯರ ಕಾನೂನಿನ ಹಕ್ಕುಗಳು.

★ **ಪರ್ಯಾಯ ಅಭಿವೃದ್ಧಿ ಮಾದರಿಗಳು :**

— ರಚನಾತ್ಮಕ ಹೊಂದಾಣಿಕೆಯ ಕಾರ್ಯಕ್ರಮಗಳು
— ವಿಜ್ಞಾನ ಮತ್ತು ತಂತ್ರಜ್ಞಾನ
— GATT
— ಬೌದ್ಧಿಕ ಸಂಪತ್ತಿನ ಹಕ್ಕು
— ಬಡತನ
— ಸ್ಥಳಾಂತರಿಸುವಿಕೆ
— ಜೀವನಾವಶ್ಯಕ ಆದಾಯ
— ಪರಿಸರ
— ಮಾನವ ವಸತಿ ಸೌಕರ್ಯಗಳು

★ **ರಾಜಕೀಯ ಅಧಿಕಾರ ಪಡೆಯುವಿಕೆ :**

★ **ಗುರುತಿನ ರಾಜಕೀಯ :**

— ಧಾರ್ಮಿಕ ಮೂಲಭೂತವಾದಿತನ
— ಕೋಮುವಾದ ಮತ್ತು ಜಾತಿವಾದ

★ **ಮಹಿಳೆ ಮತ್ತು ಆರೋಗ್ಯ :**

★ **ಪ್ರಭುತ್ವ ಮತ್ತು ಮಹಿಳಾ ಚಳವಳಿಯೊಂದಿಗೆ ಅದರ ಸಂಬಂಧ :**

★ **ಒಂಟಿ ಮಹಿಳೆ**

ದಕ್ಷಿಣ ಏಷ್ಯಾದ ಆದ್ಯತೆಯ ವಿಷಯಗಳು

★ ರಾಜಕೀಯ ಅಧಿಕಾರ ವಹಿಸುವಿಕೆ.
★ ಮಾನವ ಹಕ್ಕುಗಳು
★ ಅಭಿವೃದ್ಧಿ ಮಾದರಿಗಳು/ಆರ್ಥಿಕ/ಶ್ರಮಸಂಪತ್ತಿನ ನಿಯಮಾವಳಿಗಳು.

ಬೀಜಿಂಗ್ ಸಮಾವೇಶದ ತಾತ್ವಿಕ ಆಧಾರವನ್ನು ಪ್ರಶ್ನಿಸಿದ ಮಹಿಳಾ ಸಮಾವೇಶ

ದೆಹಲಿಯಲ್ಲಿ ಜರುಗಿದ ಮಹಿಳಾ ಸಮಾವೇಶವು ಬೀಜಿಂಗ್‌ನಲ್ಲಿ ನಡೆಯಲಿರುವ ಯುನೈಟೆಡ್ ನೇಷನ್ಸ್ ವ್ಯವಸ್ಥೆ ಮಾಡಿರುವ ಸಮ್ಮೇಳನದ ತಾತ್ವಿಕ ಆಧಾರವನ್ನೇ ಈ ರೀತಿ ಪ್ರಶ್ನಿಸುತ್ತದೆ :

ನಾವು ಮಹಿಳೆಯರು, ಮಹಿಳಾ ಕಾರ್ಮಿಕರು, ಕೃಷಿಕ ಮಹಿಳೆಯರು, ಉತ್ಪಾದಕರು, ಗ್ರಾಹಕರು ಮತ್ತು ಪ್ರಜೆಗಳು, ಈ ಕೆಳಗಿನವುಗಳನ್ನು ಪ್ರಶ್ನಿಸುತ್ತೇವೆ :

"ಅಭಿವೃದ್ಧಿಯ ಪ್ರಧಾನವಾಹಿನಿಯತ್ತ ಮಹಿಳೆಯರ ಐಕ್ಯತೆ" ಎಂಬ ಘೋಷಣೆಯಡಿ ನಡೆಯುತ್ತಿರುವ ಜಾಗತಿಕ ಪ್ರಯತ್ನದಿಂದ ಮಹಿಳೆಯ ಅಸಮಾನತೆ, ಬಂಧನ ಮತ್ತು ಹಿನ್ನಡೆಯುಂಟಾಗಲಿರುವ ರೀತಿಯನ್ನು ಮೊದಲು ಪ್ರಶ್ನಿಸುತ್ತೇವೆ. ಈ ಅಭಿವೃದ್ಧಿಯ ಹಾದಿಯು ಕೆಲವರಿಗೆ ಪ್ರಗತಿಯಾದರೆ, ಬಹುಮಂದಿಗೆ ಹಾನಿಯಾಗಿದೆ. ಕೆಲವರಿಗೆ ಶಾಂತಿ ದೊರಕಿದ್ದರೆ, ಬಹಳ ಮಂದಿಗೆ ಹಿಂಸೆ, ದೌರ್ಜನ್ಯಗಳೇ ದೊರೆತಿವೆ. ಈ ಅಭಿವೃದ್ಧಿ ಯೋಜನೆಗಳಿಂದ ಮಹಿಳೆಯರ ಹಿತಾಸಕ್ತಿಗಳು ಕಾಯುವುದಿಲ್ಲವಾದ್ದರಿಂದ, ಮಹಿಳಾ ಚಳುವಳಿಗಳು ಈ ಒತ್ತಾಯದ ಈ ಅಭಿವೃದ್ಧಿ ಮಾದರಿಗಳನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ.

ಮನುಷ್ಯನ ಅಸ್ತಿತ್ವವನ್ನು ನಿರ್ಣಯಿಸುವ ಏಕೈಕ ಪ್ರಜಾಸತ್ತಾತ್ಮಕ ಮಾರ್ಗ ಮಾರುಕಟ್ಟೆ ಎಂಬ ಸಿದ್ಧಾಂತವನ್ನು ನಿರಾಕರಿಸುತ್ತೇವೆ.

ಯಾವುದೇ ಸಾಮ್ರಾಜ್ಯಶಾಹಿ ದೇಶಗಳ ಮತ್ತು ಹಣಕಾಸು ಸಂಸ್ಥೆಗಳ ಒತ್ತಡವಿಲ್ಲದೆ ಅಭಿವೃದ್ಧಿಪಥವನ್ನು ಆರಿಸಿಕೊಳ್ಳಬಹುದಾದ ಸ್ವಾತಂತ್ರ್ಯವನ್ನು ಮೂಲಭೂತ ಹಕ್ಕಾಗಿ ಎಲ್ಲ ರಾಷ್ಟ್ರಗಳ ಸ್ವೀಕರಿಸುವಂತಾಗಬೇಕು. ಇಂತಹ ರಾಷ್ಟ್ರೀಯ ಚೌಕಟ್ಟಿನಲ್ಲಿ ಮಾತ್ರ ಮಹಿಳೆಯರು ತಮ್ಮ ಹಕ್ಕುಗಳನ್ನು ಸಮರ್ಥಿಸಿಕೊಳ್ಳಬಲ್ಲರು.

ನಾವು ರಚನಾತ್ಮಕ ಪರಿವರ್ತನೆಯನ್ನು ಒತ್ತಾಯಿಸುತ್ತೇವೆಯೇ ಹೊರತು ರಚನಾತ್ಮಕ ಹೊಂದಾಣಿಕೆಯನ್ನಲ್ಲ. ರಚನಾತ್ಮಕ ಹೊಂದಾಣಿಕೆಯಿಂದ ಬಡತನ, ಕ್ಷಾಮಗಳು ಹೆಚ್ಚಾಗಿ ಸ್ತ್ರೀಪುರುಷರ ನಡುವೆ ಬಡತನದ ಹಂಚಿಕೆಯಾಗಬಲ್ಲುದು. ಆದರೆ ರಚನಾತ್ಮಕ ಪರಿವರ್ತನೆಯಾದಾಗ ದೇಶದ ಸಂಪತ್ತಿನ ಮರುಹಂಚಿಕೆಯಾಗಿ ಸ್ತ್ರೀಪುರುಷರ ನಡುವೆ ಸಮಾನ ಹಕ್ಕುಗಳು ಸಾಧ್ಯವಾಗುತ್ತವೆ.

ಬೀಜಿಂಗ್ ಸಮಾವೇಶಕ್ಕೆಂದು ಸಿದ್ಧಪಡಿಸಿರುವ ದಾಸ್ತಾವೇಜಿನಲ್ಲಿ ಮಹಿಳೆಯರನ್ನು ಕುರಿತ ಮುಖ್ಯ ವಿಷಯುವೇ ನಾಪತ್ತೆಯಾಗಿದೆ. ಅದೆಂದರೆ, ಮಹಿಳೆಯರ ದುಸ್ಥಿತಿಗೆ ಮೂಲಕಾರಣವನ್ನು ಗುರುತಿಸದೇ ಇರುವುದು ಒಳ್ಳೆಯ ಆಶಯಗಳಿಂದ ಕೂಡಿದ ಹೇಳಿಕೆಗಳು ಮಾತ್ರ ಈ ದಾಸ್ತಾವೇಜಿನಲ್ಲಿದೆ. ಜಾಗತಿಕ ನೆಲೆಯಲ್ಲಿರುವ ಶ್ರೇಣೀಕರಣವನ್ನೂ ಕೂಡ ಇದು ಪ್ರಶ್ನಿಸುವುದಿಲ್ಲ.

ಈ ಎಲ್ಲ ಹಿನ್ನೆಲೆಯಲ್ಲಿ ನಾವು ಈ ಕೆಳಗಿನ ಸಲಹೆ, ಸೂಚನೆಗಳನ್ನು ಮಾಡುತ್ತೇವೆ.

1. ದುಡಿಮೆ ಮತ್ತು ಪರಿಸರಕ್ಕೆ ಸಂಬಂಧಪಟ್ಟಂತೆ ಬಹುರಾಷ್ಟ್ರೀಯ ಕಂಪೆನಿಗಳು ಶೋಷಣೆಯನ್ನು ಮಾಡದಂತಿರಲು ಯುನೈಟೆಡ್ ನೇಷನ್ಸ್ ಸಂಸ್ಥೆಯು ಒಂದು ನಿಯಂತ್ರಣ ಘಟಕವನ್ನು ರೂಪಿಸಬೇಕು. ಈಗ ಚಾಲ್ತಿಯಲ್ಲಿರುವ ಜಗತ್ತಿನ ಬಲಿಷ್ಠ ಶಕ್ತಿಗಳು ವಿಶೇಷವಾಗಿ ಅಮೇರಿಕೆಯು ನಡೆಸುತ್ತಿರುವ ಬುಡಮೇಲು ಚಟುವಟಿಕೆಗಳು ನಿಲ್ಲುವಂತೆ ನೋಡಿಕೊಳ್ಳಬೇಕು,

2. ಮಹಿಳೆಯ ಸ್ಥಾನಮಾನವನ್ನು ಸುಧಾರಿಸಲು ಯುನೈಟೆಡ್ ನೇಷನ್ಸ್ ತೆಗೆದುಕೊಳ್ಳುವ ಕಾರ್ಯಕ್ರಮಗಳು ಭೂ ಸುಧಾರಣೆ ಮತ್ತು ಮಹಿಳೆಯರಿಗೆ ಭೂಮಾಲಿಕತ್ವದ ಹಕ್ಕನ್ನು ಕೊಡುವಂತಿರಬೇಕು. ಕೃಷಿ ಮಹಿಳಾ ಕಾರ್ಮಿಕರ, ಅಸಂಘಟಿತ ಮಹಿಳಾ ಕಾರ್ಮಿಕರ ಮತ್ತು ಮನೆಗೆಲಸದ ಮಹಿಳೆಯರು – ಒಟ್ಟಾರೆಯಾಗಿ ಈ ಎಲ್ಲ ಮಹಿಳೆಯರ ಹಿತ ರಕ್ಷಿಸಲು

ವಿಶೇಷ ಅಂತರರಾಷ್ಟ್ರೀಯ ಸಮಾವೇಶಗಳನ್ನು ಯು. ಎನ್. ಸಂಸ್ಥೆಯು ನಡೆಸಬೇಕು. ಹಾಗೆ ಮಾಡಿದಲ್ಲಿ ಸದಸ್ಯ ರಾಷ್ಟ್ರಗಳಿಗೆ ಅಗತ್ಯ ಕಾನೂನುಗಳನ್ನು ಮಾಡು ವಂತೆ ಆದೇಶಿಸಿ ಮಹಿಳೆಯ ದುಡಿಮೆಯೂ ಬೆಲೆ ಯುಳ್ಳದ್ದು ಎಂದು ಹೇಳುವುದರ ಜೊತೆಗೆ ಸಮಾನ ದುಡಿಮೆಗೆ ಸಮಾನ ವೇತನವು ದೊರೆಯುವಂತೆ ಮಾಡ ಬಹುದು.

3. ಲಿಂಗ ಬೇಧ ಅಸಮಾನತೆಯನ್ನು ತೊಡೆದು ಹಾಕಲು ಆರ್ಥಿಕ ಸ್ವಾತಂತ್ರ್ಯವು ಬಹುಮುಖ್ಯವಾದ ಅಂಶವಾದ್ದರಿಂದ ಭಾರತ ಸರ್ಕಾರವು ಆಧುನಿಕತೆಯ ನೆಪದಲ್ಲಿ ಮಹಿಳೆಯರನ್ನು ಕೆಲಸದಿಂದ ತೆಗೆಯುವುದು, ಸ್ಥಳಾಂತರಿಸುವುದು– ಮುಂತಾದವನ್ನು ಮಾಡಬಾರದು. ತರಬೇತಿಯ ಮೂಲಕ ಮಹಿಳಾ ಕಾರ್ಮಿಕರಿಗೆ ಹೊಸ ಹೊಸ ಕ್ಷೇತ್ರಗಳಲ್ಲಿ ಪರಿಣತಿಯನ್ನು ದೊರಕಿಸಿಕೊಟ್ಟು ಪರ್ಯಾಯ ಉದ್ಯೋಗದ ಮಾದರಿಗಳನ್ನು ನೀಡಬೇಕು.

4. ಆಹಾರ ಪದಾರ್ಥಗಳಿಗೆ ಸಬ್ಸಿಡಿ ಕೊಡುವು ದನ್ನು ನಿಲ್ಲಿಸುವುದನ್ನು ನಾವು ವಿರೋಧಿಸುತ್ತೇವೆ. ಆಹಾರದ ಭದ್ರತೆಯನ್ನು ಪ್ರಜೆಗಳೆಲ್ಲರಿಗೂ ಕೊಡುವುದು ಸರ್ಕಾರದ ಕರ್ತವ್ಯ. ಎಲ್ಲ ಗ್ರಾಹಕರಿಗೂ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ಆಹಾರ ಹಂಚಿಕೆಯ ಕಾರ್ಯ ನಡೆಸಬೇಕು.

5. ಪರಿಸರ ರಕ್ಷಣೆಯ ಹೆಸರಿನಲ್ಲಿ ಅರಣ್ಯ ಪ್ರದೇಶಗಳಿಗೆ ಹೋಗುವ ಮಹಿಳೆಯರಿಗೆ ವಿಧಿಸಿರುವ ನಿಷೇಧವನ್ನು ತೆಗೆದುಹಾಕಿ ಅವರ ಜೀವನಾವಶ್ಯಕ ಅಗತ್ಯ ಗಳಿಗಾಗಿ ಸೌದೆ, ಸೊಪ್ಪು ಆರಿಸಲು ಅನುಮತಿಯಿರ ಬೇಕು.

6. ಸರ್ಕಾರವು ಈ ರೀತಿಯ ಸಾಮೂಹಿಕ ಸಂಪತ್ತನ್ನು ಎಲ್ಲರಿಗೂ ದೊರಕುವಂತೆ ಮಾಡುವುದರ ಜೊತೆಗೆ, ಎಲ್ಲರಿಗೂ ದೈನಂದಿನ ಅಗತ್ಯಗಳಾದ ಕುಡಿಯುವ ನೀರು, ನೈರ್ಮಲ್ಯದ ವ್ಯವಸ್ಥೆ, ತಲೆಯ ಮೇಲೊಂದು ಸೂರು ದೊರೆಯುವಂತೆ ಮಾಡಬೇಕು.

7. ಚುನಾವಣೆಗೆ ಸ್ಪರ್ಧಿಸುವಾಗ ಸಂತಾನದ ಸಂಖ್ಯೆಯನ್ನು ಅರ್ಹತೆಯ ಲಕ್ಷಣವನ್ನಾಗಿ ತೆಗೆದುಕೊಳ್ಳ ಬಾರದು. ಮಹಿಳೆಯರ ರಾಜಕೀಯ ಭಾಗವಹಿಸುವಿಕೆ ಯನ್ನು ಪ್ರೋತ್ಸಾಹಿಸಲು ಶಾಸನಸಭೆ ಮತ್ತು ಪಾರ್ಲಿಮೆಂಟ್, ಎಲ್ಲ ಹಂತದಲ್ಲೂ ಶೇಕಡ 33 ರಷ್ಟು ಮೀಸಲಾತಿ ಇರಬೇಕು.

8. ಕೋಮು ಹಿಂಸೆ ಮತ್ತು ಧಾರ್ಮಿಕ ಮೂಲ ಭೂತವಾದಿತನವನ್ನು ತಡೆಗಟ್ಟಲು ಸರ್ಕಾರವು ರಾಜಕೀಯದಿಂದ ಧರ್ಮವನ್ನು ಬೇರ್ಪಡಿಸಿ ಹೊರಗಿಡ ಬೇಕು. ಜಾತಿ ಹಾಗೂ ಕೋಮುಗಳ ಆಧಾರದ ಪ್ರಚಾರ ಕಾರ್ಯವನ್ನು ಚುನಾವಣೆಯಲ್ಲಿ ಸ್ಪರ್ಧಿಸಲು ಅನರ್ಹತೆ ಎಂದು ಭಾವಿಸಬೇಕು.

9. ದೈಹಿಕ ಅತ್ಯಾಚಾರಕ್ಕೆ ಒಳಗಾಗುವ ಹೆಣ್ಣು ಮಕ್ಕಳ ಪುನರ್ವಸತಿಗೆ ಹಾಗೂ ಸಮಾಧಾನಕರ ಜೀವನ ನಡೆಸಲು ವಿಶೇಷ ಕಾನೂನಿನ ವ್ಯವಸ್ಥೆ ಆಗಬೇಕು.

10. ಮಹಿಳೆಯರು ಪುರುಷರೊಂದಿಗೆ ಸರಿ ಸಮಾನವಾದ ಸ್ಥಾನಮಾನ ಹೊಂದಲು ಕುಟುಂಬ ದೊಳಗಿನ ಅವರ ಪಾತ್ರವನ್ನು ಸಮಾನವೆಂದು ಪರಿಗಣಿಸುವಂತೆ ಅವರ ಆಸ್ತಿ ಹಕ್ಕು, ಜೀವನಾಂಶ, ಉತ್ಪಾದಕ ಮತ್ತು ಇತರೇ ಆಸ್ತಿಗಳಿಗೆ ಸಂಬಂಧಪಟ್ಟಂತೆ ಜಂಟಿ ಮಾಲಿಕತ್ವ ಮುಂತಾದವುಗಳಿಗೆ ಸಂಬಂಧಪಟ್ಟಂತೆ ಪ್ರಗತಿಪರ ಕಾನೂನುಗಳನ್ನು ಮಾಡಬೇಕು. ಹೆಂಡತಿ ಯನ್ನು ಹೊಡೆಯುವುದನ್ನೂ ಒಂದು ಕ್ರಿಮಿನಲ್ ಅಪರಾಧವೆಂದೇ ಭಾವಿಸಬೇಕು.

11. ಸರ್ಕಾರವು ಮಹಿಳೆಯರ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು. ಪ್ರೌಢಶಾಲೆಯ ವಿದ್ಯಾಭ್ಯಾಸದವರೆಗೂ ಕಡ್ಡಾಯ ಶಿಕ್ಷಣವು ಉಚಿತವಾಗಿ ನೀಡಬೇಕಾದ್ದಷ್ಟೇ ಅಲ್ಲದೆ ಸಮವಸ್ತ್ರ, ಊಟ ಮತ್ತು ಪಠ್ಯ ಪುಸ್ತಕಗಳನ್ನೂ ಉಚಿತವಾಗಿ ನೀಡಿ ಪ್ರೋತ್ಸಾಹಿಸ ಬೇಕು. ಉನ್ನತ ಶಿಕ್ಷಣವೂ ಕೂಡ ಖಾಸಗಿ ಸಂಘ ಸಂಸ್ಥೆಗಳ ಕೃಪೆಯ ಬಿಗಿ ಮುಷ್ಟಿಯಲ್ಲಿ ಅಡಗಿ ಸಾಮಾನ್ಯ ಮಹಿಳೆಯರಿಗೆ ಲಭ್ಯವಾಗದಂತೆ ಆಗಬಾರದು.

12. ದುಡಿಯುವ ಮಹಿಳೆಯರಿಗೆ ಬೆಂಬಲ ವಾಗಿ ಶಿಶುಪಾಲನಾ ಕೇಂದ್ರಗಳನ್ನು ತೆರೆಯಬೇಕು. ವಯಸ್ಸಾದವರಿಗೆ, ರೋಗಿಗಳಿಗೆ ಹಾಗೂ ಪರಿತ್ಯಕ್ತ ಮಹಿಳೆಯರಿಗೆ ವಸತಿ ಮತ್ತು ರಕ್ಷಣೆ ದೊರಕುವಂತಹ ವ್ಯವಸ್ಥೆಯಾಗಬೇಕು.

ಈ ಹೇಳಿಕೆಯನ್ನು ಏಳು ರಾಷ್ಟ್ರೀಯ ಮಹಿಳಾ ಸಂಘಟನೆಗಳು ಒಪ್ಪಿ ಸಹಿ ಹಾಕಿದ್ದಾರೆ. ●

ಹೋರಾಟದ ಆಶಾಕಿರಣ ಸೂಕಿ

ಆಂಗ್ ಸ್ಯಾನ್ ಸೂಕಿ, ಬಹುಶಃ ನೆಲ್ಸನ್ ಮಂಡೆಲಾ ನಂತರ ಜಗತ್ತಿನಲ್ಲಿ ಕೇಳಿಬರುತ್ತಿರುವ ಪ್ರಮುಖ ಹೆಸರು. ಅನೇಕ ವರ್ಷಗಳ ಕಾಲ ಸೆರೆಮನೆಯಲ್ಲಿಯೇ ಬದುಕಿದ್ದ ನೆಲ್ಸನ್ ಮಂಡೆಲಾ ಅವರ ಬಿಡುಗಡೆಯು ವರ್ಣಭೇದ ನೀತಿಯ ಮೂಲೋಚ್ಚಾಟನೆಗೆ ಪ್ರತೀಕವಾಯಿತು; ಮಾನವ ಹೋರಾಟಕ್ಕೆ ಫಲವಿದ್ದೇ ಎಂಬುದಕ್ಕೆ ದ್ಯೋತಕವಾಯಿತು. ಮಂಡೆಲಾ ಅವರಂತೆಯೇ ಸೆರೆಮನೆ (ಗೃಹ ಬಂಧನ) ವಾಸಿಯಾದ ಸೂಕಿಯ ಬಿಡುಗಡೆ ಇನ್ನೂ ಮರೀಚಿಕೆಯೇ ಆಗಿದೆ. ಮ್ಯಾನಮಾರ್ (ಬರ್ಮಾ) ಸ್ವಾತಂತ್ರ್ಯ ಹೋರಾಟಗಾರ್ತಿಯಾದ ಸೂಕಿ 1989 ರಿಂದಲೂ ತನ್ನ ದೇಶದ ರಾಜಧಾನಿಯಾದ ರಂಗೂನಿನಲ್ಲಿ, ಗೃಹಬಂಧನದಲ್ಲಿದ್ದಾಳೆ.

ಮಂಡೆಲಾ ಅವರು ದೀರ್ಘಕಾಲ ಜೈಲಿನಲ್ಲಿದ್ದರೂ ದಕ್ಷಿಣ ಆಫ್ರಿಕಾದ ಹೋರಾಟದಲ್ಲಿ ಅವರ ಹೆಸರು ಪದೇ ಪದೇ ಕೇಳಿಬರುತ್ತಿತ್ತು; ಹೋರಾಟದಲ್ಲಿ ವರ್ಣೀಯರು ಸತ್ತಾಗ ಮಂಡೆಲಾ ನೆನೆಪು ಕಾಡುತ್ತಿತ್ತು; ಅವರ ಬಿಡುಗಡೆಗೆ ವಿಶ್ವ ಒತ್ತಡ ಹೆಚ್ಚಾಗುತ್ತಿತ್ತು. ಆದರೆ ನೊಬೆಲ್ ಶಾಂತಿ ಪಾರಿತೋಷಕ ಪಡೆದಿರುವ ಸೂಕಿಯ ಪರಿಸ್ಥಿತಿ ಭಿನ್ನ. ಮ್ಯಾನಮಾರ್‌ನಲ್ಲಿ ಇಂದಿಗೂ ವಿಮೋಚನಾ ಹೋರಾಟ ಪ್ರಬಲವಾಗಿದೆ. ಆದರೆ ಸೂಕಿಯ ಸ್ಥಿತಿಗತಿಯನ್ನು ಅದು ಸ್ಪಷ್ಟಪಡಿಸುವುದಿಲ್ಲ. ಮಿಲಿಟರಿ ಆಡಳಿತದ ವಿರುದ್ಧ ಬಾವುಟ ಹಾರಿಸಿದ ಸೂಕಿಯನ್ನು 1989ರ ಜುಲೈನಲ್ಲಿ ಗೃಹ ಬಂಧನದಲ್ಲಿರಿಸಲಾಯಿತು. ಅಲ್ಲಿಗೆ, ಹೊರ ಜಗತ್ತಿಗೆ, ಆಕೆಯ ಸಂಪರ್ಕ ಕಡಿಯಿತು. ಆಕೆಯನ್ನು ಯಾರೂ ಭೇಟಿ ಮಾಡುವಂತಿಲ್ಲ. ಇತ್ತೀಚೆಗೆ ಸೂಕಿಯನ್ನು ಕುಟುಂಬ ವರ್ಗದವರು ಭೇಟಿ ಮಾಡುವ ಅವಕಾಶ ನೀಡಲಾಗಿತ್ತೆಂಬ ವರದಿಗಳು ಇವೆ. ಅವುಗಳ ಸತ್ಯಾಂಶ ಯಾರಿಗೂ ತಿಳಿಯದು.

ಮ್ಯಾನಮಾರ್‌ನಲ್ಲಿ ಪ್ರಜಾಪ್ರಭುತ್ವ ಸ್ಥಾಪನೆಗಾಗಿ, ಅಲ್ಲಿನ ಜನರ ಮಾನವ ಹಕ್ಕು ಸ್ಥಾಪನೆಗಾಗಿ ಹೋರಾಟ ನಡೆಸಿರುವ ಸೂಕಿಗೆ 1991 ರಲ್ಲಿ ನೊಬೆಲ್ ಶಾಂತಿ ಬಹುಮಾನ ನೀಡಲಾಯಿತು. ಈ ಸುದ್ದಿಯನ್ನು ಆಗ ಮ್ಯಾನಮಾರ್ ರೇಡಿಯೊ ಬಿತ್ತರಿಸಲಿಲ್ಲ ! ಬಹುಮಾನ ಸ್ವೀಕರಿಸಲು ಸೂಕಿಗೆ ಅವಕಾಶ ಸಿಗಲಿಲ್ಲ ಎಂದು ಹೇಳಬೇಕಾಗಿಲ್ಲ. ನೊಬೆಲ್ ಬಹುಮಾನದ ಪಟ್ಟಿಯಲ್ಲಿ ಸೂಕಿ ಹೆಸರು ಪ್ರಕಟಗೊಂಡಾಗ ಸೂಕಿ ಬಿಡುಗಡೆಗೆ ಜಗತ್ತು ಆಗ್ರಹಪಡಿಸಿತು. ಆದರೆ ಬಂದೂಕಿನಿಂದಲೇ ಬಾಯಿ ಮುಚ್ಚಿಸುತ್ತೇವೆ ಎಂಬ ಮಂತ್ರದಂಡ ಹಿಡಿದಿರುವ ಮ್ಯಾನಮಾರ್ ಮಿಲಿಟರಿ ಆಡಳಿತವು ಅದಕ್ಕೆ ಕಿವಿಗೊಡಲಿಲ್ಲ. ಸೂಕಿ ರಾಜಕೀಯ ಹೋರಾಟವನ್ನು ಕೈಬಿಟ್ಟು, ಗೃಹಿಣಿ–ಉದ್ಯೋಗಸ್ಥ ಮಹಿಳೆಯಂತೆ ಬದುಕುವ ಮುಚ್ಚಳಿಕೆ ಬರೆದುಕೊಟ್ಟರೆ ಬಿಡುಗಡೆ ಸಾಧ್ಯ ಎಂದು ಕಪಿಮುಷ್ಟಿಯ ಸೇನಾಧಿಕಾರಿಗಳು ಸಾರಿದರು. ಮಾನವ ಹಕ್ಕು ಸ್ಥಾಪಿಸ ಹೊರಟಿರುವ ಸೂಕಿಯಂಥ ಮಹಾನ್ ಹೋರಾಟಗಾರರಿಗೆ ವೈಯಕ್ತಿಕ ಲಾಭಾಂಶ ಎಳ್ಳಷ್ಟೂ ಇರುವುದಿಲ್ಲವೆಂಬ ಸತ್ಯಾಂಶ ಮಿಲಿಟರಿ ಆಡಳಿತಕ್ಕೆ ತಿಳಿಯುವುದಾದರೂ ಎಂತು ?

ಮ್ಯಾನಮಾರ್ (ಅಂದಿನ ಬರ್ಮಾ) ಸ್ವಾತಂತ್ರ್ಯ ಕುರಿತಂತೆ ಬ್ರಿಟಿಷರ ಜತೆ ಮಾತುಕತೆ ನಡೆಸಿದ್ದ ಜ. ಆಂಗ್ ಸ್ಯಾನ್ ಅವರ ಮಗಳಾದ ಸೂಕಿ ಬಾಲ್ಯದಲ್ಲಿಯೇ ರಕ್ತಪಾತ ಕಂಡವಳು. 1947ರಲ್ಲಿ ಅವಳ ತಂದೆಯು (ಆಗ ಅವರಿಗೆ 32ರ ಪ್ರಾಯ) ಹತ್ಯೆಯಾದಾಗ ಸೂಕಿಗೆ ಎರಡು ವರ್ಷ. ತಾಯಿಯ ಜೊತೆ ಬದುಕಿನ ಹೋರಾಟದಲ್ಲಿ ಪ್ರತಿಭಾವಂತೆಯಾಗಿ ಅರಳಿದವಳು, ಸೂಕಿ ಬರ್ಮಾ, ಭಾರತ, ಆಕ್ಸ್‌ಫರ್ಡ್‌ನಲ್ಲಿ ಶಿಕ್ಷಣ ಪಡೆದ ಸೂಕಿ ವಿದ್ವತ್‌ಪೂರ್ಣ ಗ್ರಂಥಗಳನ್ನೂ ರಚಿಸಿದ್ದಾಳೆ. ತಂದೆಯ ನಾಮಫಲಕದಿಂದ ಸೂಕಿಗೆ ಸ್ಥಾನಮಾನ ದೊರಕಿದೆ ಎಂಬ ಕೆಲವರ ಟೀಕೆ ಹುರುಳಿಲ್ಲದ್ದು. ಸೂಕಿಯ ತಾಯಿ ಭಾರತದಲ್ಲಿ ಬರ್ಮಾದ ರಾಯಭಾರಿಯಾಗಿದ್ದಾಗ ಸೂಕಿ ದೆಹಲಿಯ ಕಾಲೇಜಿನಲ್ಲಿ ಕಲಿತಳು; ಆಗಲೇ ಅವಳಿಗೆ ಪ್ರಜಾಸತ್ತಾತ್ಮಕ ವ್ಯವಸ್ಥೆಯ ಯಶಸ್ವಿ ಕಾರ್ಯ ನಿರ್ವಹಣೆಯ ಪರಿಚಯವಾಯಿತು. ಮುಂದೆ ಆಕ್ಸ್‌ಫರ್ಡ್‌ನಲ್ಲಿ ಕಲಿತು, ಪ್ರಾಧ್ಯಾಪಕ ಮೈಕೇಲ್ ಆ್ಯರಿಸ್ ಅವರನ್ನು ವಿವಾಹವಾಗಿ ಬ್ರಿಟನ್ನಿನಲ್ಲಿ ವಾಸಿಸತೊಡಗಿದಾಗ ತನ್ನ ದೇಶದ ಸಂಕೀರ್ಣ ಸಮಸ್ಯೆಯನ್ನು

ಅಧ್ಯಯನ ಮಾಡತೊಡಗಿದಳು. ಆಗಿನ ಅವಳ ಲೇಖನಗಳಲ್ಲಿ ತನ್ನ ದೇಶದ ಪರಿಸ್ಥಿತಿ ಬಗೆಗೆ ಅವಳು ಗಂಭೀರ ಚಿಂತನೆ ತೊಡಗಿದ್ದುದು ಸ್ಪಷ್ಟವಾಗುತ್ತದೆ.

ತಾಯಿ ಆರೋಗ್ಯ ಕ್ಷೀಣಿಸಿದಾಗ ಅವಳು ರಂಗೂನಿಗೆ, 1988ರಲ್ಲಿ ಬಂದಳು. ಪ್ರಜಾಸತ್ತೆಗಾಗಿ ಹೋರಾಟ ಆರಂಭವಾಗಿತ್ತು. ಆದರೆ ಸರಿಯಾದ ನಾಯಕತ್ವ ಇರಲಿಲ್ಲ. ಮಾರ್ಗದರ್ಶನದ ಅಭಾವವಿತ್ತು. ಈ ಸನ್ನಿವೇಶದಲ್ಲಿ ಸೂಕಿ ಹೋರಾಟದ ಕಣದಲ್ಲಿ ಧುಮುಕಿದಳು. ಇಂಥ ಮಹಾನ್ ಹೋರಾಟದಲ್ಲಿ ಎದುರಿಸಬೇಕಾದ ತೊಡಕುಗಳ ಅರಿವು ಅವಳಿಗಿತ್ತು. ದೇಶಕ್ಕೆ ಪ್ರಜಾಸತ್ತೆ ಬೇಕು, ಅದು ಅಹಿಂಸಾತ್ಮಕ ಹೋರಾಟದಿಂದಲೇ ಬರಬೇಕೆಂಬುದು ಅವಳ ದೃಢ ನಂಬಿಕೆ. ಅವಳು ಎಂದಿಗೂ ತನ್ನನ್ನು ನಾಯಕಿಯ ಸ್ಥಾನದಲ್ಲಿ ನಿಲ್ಲಿಸಿಕೊಳ್ಳಲಿಲ್ಲ. ಬದಲಿಗೆ ಅತ್ಯಂತ ಗೌರವಾನ್ವಿತ ವ್ಯಕ್ತಿ ಜ. ಟಿನ್ ಊ ಅವರನ್ನು ನೇತಾರನ ಸ್ಥಾನದಲ್ಲಿ ಇರುವಂತೆ ಮಾಡಿದರು. ಮುಂದೆ 'ನ್ಯಾಷನಲ್ ಲೀಗ್ ಫಾರ್ ಡೆಮೊಕ್ರೆಸಿ' ರೂಪುಗೊಂಡಾಗ ಕೂಡ ಊ ಅವರೇ ಅದರ ನೇತಾರನಾದರು. ಈಗಲೂ ಅವರೇ ನಾಯಕ ಸ್ಥಾನದಲ್ಲಿದ್ದಾರೆ. ಅವರನ್ನು ಮಿಲಿಟರಿ ಆಡಳಿತವು ಸೆರೆಮನೆಗೆ ತಳ್ಳಿದೆ. 1989ರ ವೇಳೆಗೆ ವಿಮೋಚನಾ ಹೋರಾಟಕ್ಕೆ ಒಂದು ತಾತ್ವಿಕ ನೆಲೆಗಟ್ಟು ದೊರೆತು ಮಿಲಿಟರಿ ಆಡಳಿತದ ತಲೆ ಬಿಸಿ ಮಾಡಿತು. "ಈಕೆ ಜನರನ್ನು ತಪ್ಪು ದಾರಿಗೆ ಎಳೆಯುತ್ತಿದ್ದಾಳೆ" ಎಂದು ಅಧಿಕಾರಿಗಳು 1989ರ ಮಧ್ಯ ಭಾಗದಲ್ಲಿಯೇ ಅವಳನ್ನು ಗೃಹ ಬಂಧನದಲ್ಲಿರಿಸಿದರು. 1990ರಲ್ಲಿ ದೇಶದಲ್ಲಿ ಲೀಗ್‌ಗೆ ಬಹುಮತ ಬರುವ ವೇಳೆಗೆ ಸೂಕಿ ಸೆರೆಮನೆಯಲ್ಲಿದ್ದಳು. ಆಡಳಿತವು ಈ ಜನವಾದವನ್ನು ತಿರಸ್ಕರಿಸಿತ್ತು.

ಸೂಕಿಗೆ ನೊಬೆಲ್ ಬಹುಮಾನ ಬಂದಾಗ ಅವಳ ಪತಿ ಆ್ಯರಿಸ್ ಹೇಳಿದ್ದ ಮಾತು ಸೂಕಿಯ ವ್ಯಕ್ತಿತ್ವವನ್ನು ಪ್ರತಿಬಿಂಬಿಸುತ್ತದೆ. "ಅವಳನ್ನು ಅವರು ಎಷ್ಟು ದಿನ ಬಂಧನದಲ್ಲಿರಿಸಬಹುದು ? ಏಕಾಂತವಾಸಿ ಮಾಡಬಹುದು ? ಅದೆಲ್ಲಾ ಅವಳ ಸ್ಫೂರ್ತಿಯನ್ನು, ಅವಳ ನಂಬಿಕೆಯನ್ನು ನಾಶಪಡಿಸೋದಿಲ್ಲ, ಅವಳು ಖಂಡಿತಾ ಸೋಲೋದಿಲ್ಲ". (ಈಗ ಸೂಕಿಗೆ 50ರ ಪ್ರಾಯ)

ಮ್ಯಾನಮಾರ್ ವಿಮೋಚನಾ ಹೋರಾಟಕ್ಕೆ ಈಗ ಬೇಕಾಗಿರುವುದು ಏನು ? ಸೂಕಿಯ ಬಿಡುಗಡೆ ಎಂಬ ಅಂಶ ನಿಜ. ಜತೆಗೆ ಭಾರತದಂಥ ದೇಶಗಳ ಸಹಕಾರ ಧ್ವನಿಯ ಅಗತ್ಯವಿದೆ ಎಂದು ಸೂಕಿ ಹೇಳುತ್ತಾಳೆ. ಇದು ಧನ ಸಹಾಯದ ಮಾತಲ್ಲ. ಮ್ಯಾನಮಾರ್ ಜನರ ಮಹಾನ್ ಹೋರಾಟಕ್ಕೆ ಭಾರತದ ನೈತಿಕ ಬೆಂಬಲಬೇಕು ಎಂದು ಅವಳು ಹೇಳುತ್ತಾಳೆ. ಬರ್ಮಾ ಜನರ ತೀವ್ರ ಪ್ರಯತ್ನದಿಂದಲೇ ಜಯಗಳಿಸುವುದು ಸಾಧ್ಯ ಎಂಬುದು ಸ್ಪಷ್ಟ. ಆದರೆ ಬೃಹತ್ ಹೋರಾಟಕ್ಕೆ ನೈತಿಕ ಬೆಂಬಲ, ವಿಶ್ವ ಸಹಕಾರ ಹಸ್ತ ಅಗತ್ಯ ಎಂಬುದೂ ಅಷ್ಟೇ ಸ್ಪಷ್ಟ. ಭಾರತದ ನಾಯಕರ ಚಿಂತನೆಯಲ್ಲಿ ಬರ್ಮಾ ಇಲ್ಲ ಎಂಬುದೇ ಅಲ್ಲಿನ ಜನರ ವ್ಯಥೆ. ಮಿಲಿಟರಿ ಆಡಳಿತದ ವಿರುದ್ಧ ಧ್ವನಿ ಏರಿಸಿರುವ ಬರ್ಮಾ ಜನರಿಗೆ ನೈತಿಕ ಬೆಂಬಲ ನೀಡುವುದರ ಜತೆಗೆ ಸೂಕಿ ಬಿಡುಗಡೆಗೆ ವಿಶ್ವದ ಒತ್ತಡ ಹೆಚ್ಚಿಸುವ ಪ್ರಯತ್ನ ಮಾಡಬೇಕಾದುದು ಮಾನವ ಹಕ್ಕು ಪ್ರತಿಪಾದಿಸುವ ಪ್ರತಿಯೊಬ್ಬರ ಆದ್ಯ ಕರ್ತವ್ಯವೂ ಹೌದು. ಏಕೆಂದರೆ ಸೂಕಿ ಮಾನವ ಹೋರಾಟದ ಆಶಾಕಿರಣ.

[ಮಿಲಿಟರಿ ಆಡಳಿತ ಹೆಸರಿಸಿರುವ ಮ್ಯಾನಮಾರ್ ಹೆಸರನ್ನು ಅನೇಕ ಜನರು ಒಪ್ಪುವುದಿಲ್ಲ. ಬರ್ಮಾ ಎಂದೇ ಸರಿ ಎಂದು ವಾದಿಸುತ್ತಾರೆ. ಹೀಗಾಗಿ ಲೇಖನದಲ್ಲಿ ಎರಡೂ ಸಂದರ್ಭಕ್ಕೆ ತಕ್ಕಂತೆ ಬಂದಿದೆ]

ಜಾಗತಿಕ ಭೂಪಟದಲ್ಲಿ ಮಹಿಳಾ ದಿನ

ಈ ಶತಮಾನದ ಆಧಿಭಾಗದಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನವು ಮತದಾನದ ಹಕ್ಕಿಗಾಗಿ ಹೋರಾಡುತ್ತಿದ್ದ ಮಹಿಳೆಯರಿಂದಾಗಿ ಅತ್ಯಂತ ಪ್ರಾಮುಖ್ಯತೆ ಪಡೆಯಿತು. 1808ರಲ್ಲಿ ಸೋಷಿಯಲಿಸ್ಟ್ ಮಹಿಳೆಯರು ನ್ಯೂಯಾರ್ಕ್‌ನಲ್ಲಿ ಆ ದಿನ ಮೊದಲ ಬಾರಿ ಪ್ರತಿಭಟನಾ ಪ್ರದರ್ಶನ ಮಾಡಿದರು. ಬೂರ್ಷ್ವಾ ಮಹಿಳೆಯರ ಮತದಾನ ಚಳುವಳಿ ಆ ವೇಳೆಗಾಗಲೇ ಬಿರುಸಿನಿಂದ ಪ್ರಚಾರದಲ್ಲಿದ್ದರೂ 1917ರಲ್ಲಿ ಮಾತ್ರ ಅವರಿಗೆ ಮತದಾನದ ಹಕ್ಕು ದೊರೆಯಿತು.

1920ರ ವೇಳೆಗೆ ಎಲ್ಲ ಅಮೆರಿಕದ ಮಹಿಳೆಯರು ಮತದಾನದ ಹಕ್ಕು ಪಡೆದರು. ಅಮೆರಿಕಾ ಸಂಸ್ಥಾನದ ಸಂವಿಧಾನದ ಹತ್ತನೆಯ ತಿದ್ದುಪಡಿ ಇದನ್ನು ಸಾಧ್ಯ ಮಾಡಿತು.

ಬ್ರಿಟನ್ನಿನಲ್ಲಿ 1906 ರಲ್ಲಿಯೇ ಮಹಿಳಾ ಮತ ಚಲಾವಣೆಯ ಹಕ್ಕಿಗಾಗಿ ಚಳುವಳಿ ಆರಂಭವಾಗಿತ್ತು. ಬ್ರಿಟನ್ನಿನ ಆಳುವ ಪ್ರತಿಷ್ಠಿತರು ಮೂವತ್ತು ವರ್ಷಕ್ಕೂ ಮೇಲ್ಪಟ್ಟ ಮಹಿಳೆಯರಿಗೆ 1918ರಲ್ಲಿ ಮತ ನೀಡುವ ರಿಯಾಯಿತಿ ತೋರಿಸಿದರು. ಆದರೆ 1928 ರಲ್ಲಿ ಬ್ರಿಟನ್ನಿನ 21 ವರ್ಷ ವಯಸ್ಸಿನ ಎಲ್ಲ ಮಹಿಳೆಯರು ಮತ ಚಲಾಯಿಸಲು ಅನುಮತಿ ದೊರೆಯಿತು.

ಮಹಿಳೆಯರಿಗೆ ಮತದಾನದ ಹಕ್ಕನ್ನು ನೀಡಿದ ಮೊದಲ ದೇಶವೆಂದರೆ ನ್ಯೂಜಿಲ್ಯಾಂಡ್. ಅದು 1893ರಲ್ಲಿ ಫಿನ್‌ಲ್ಯಾಂಡಿನ ಮಹಿಳೆಯರಿಗೆ 1906 ರಲ್ಲಿ ಮತ ನೀಡುವ ಸವಲತ್ತು ಕೊಟ್ಟವನು ರಷ್ಯಾದ ತ್ಸಾರ್. ನಂತರ 1907ರಲ್ಲಿ ನಾರ್ವೆ ಈ ದೇಶವನ್ನು ಅನುಸರಿಸಿತು.

ನ್ಯೂಯಾರ್ಕ್‌ನಲ್ಲಿ 1908 ರಂದು ಕಾರ್ಮಿಕ ಮಹಿಳೆಯರು ಮಹಿಳಾ ದಿನದಂದು ನಡೆಸಿದ ಹೋರಾಟ ಸೋಷಿಯಸ್ಟ್ ಮಹಿಳಾ ನಾಯಕಿಯರ ಗಮನ ಸೆಳೆಯಿತು.

1910ರಲ್ಲಿ ಹೊಸದಾಗಿ ಸ್ಥಾಪಿತವಾಗಿದ್ದ ಅಂತರ ರಾಷ್ಟ್ರೀಯ ಸೋಷಿಯಲಿಸ್ಟ್ ಮಹಿಳಾ ಚಳುವಳಿಯ ನಾಯಕಿಯಾದ ಕ್ಲಾರಾ ಜೆಟ್‌ಕಿನ್ ಅವರ ಎರಡನೇ ಸಮಾವೇಶದಲ್ಲಿ ನಿರ್ಣಯವೊಂದನ್ನು ಮಂಡಿಸಿದಳು. ಮತದಾನದ ಚಳುವಳಿಯಲ್ಲಿಯಾವುದೇ ಮಿತಿಯನ್ನುಂಟು ಮಾಡುವುದು "ಮಹಿಳೆಯರಿಗೆ ದೊರಕಬೇಕಾಗಿರುವ ರಾಜಕೀಯ ಸಮಾನತೆಯ ಮೂಲಭೂತತತ್ವವನ್ನು ಸುಳ್ಳಾಗಿಸುತ್ತದೆ, ಮತ್ತು ಅವಮಾನಿಸಿದಂತಾಗುತ್ತದೆ" ಮಾರ್ಚ್ 8ನ್ನು ಅಂತರರಾಷ್ಟ್ರೀಯ ಮಹಿಳಾ ದಿನವನ್ನಾಗಿ ಆಚರಿಸಬೇಕೆಂದು ಘೋಷಿಸಿದಳು. ಅದರ ಘೋಷಣೆ : "ಸಾರ್ವತ್ರಿಕ ಮತದಾನದ ಹಕ್ಕು" ಎಂದಾಗಿತ್ತು.

1911 ರಿಂದ ಹಿಡಿದು ಮೊದಲ ಜಾಗತಿಕ ಯುದ್ಧದ ಆರಂಭದವರೆಗೂ ಯೂರೋಪಿನ ಮಹಿಳೆಯರು ಈ ದಿನದಂದು ಪ್ರಮುಖ ಪಟ್ಟಣಗಳಲ್ಲಿ ಪ್ರತಿಭಟನಾ ಪ್ರದರ್ಶನ, ಮೆರವಣಿಗೆಗಳನ್ನು ನಡೆಸುತ್ತಿದ್ದರು.

ಮೊದಲ ಸಮಾಜವಾದಿ ರಾಷ್ಟ್ರವಾದ ರಷ್ಯಾದಲ್ಲಿ ಮೊದಲಿಗೆ ಮಹಿಳಾ ದಿನ ಅಂತಹ ಪ್ರಾಮುಖ್ಯತೆಯನ್ನೇನೂ ಪಡೆಯಲಿಲ್ಲ. 1911ರಲ್ಲಿ ಅಲೆಗ್ಸಾಂಡ್ರಾ ಕೊಲಂತ್ಯೆ ಇದನ್ನು ಗಮನಿಸುತ್ತಾ "ಪಕ್ಷದ ನಾಯಕರಿಗೆ ಮಹಿಳಾ ದಿನದ ಪ್ರಾಮುಖ್ಯತೆ ಅಷ್ಟಾಗಿ ಮನವರಿಕೆಯಾಗುತ್ತಿಲ್ಲ. ನನ್ನ ಎಷ್ಟೇ ಒತ್ತಾಯವೂ ಅವರಲ್ಲಿ ಪ್ರತಿಕ್ರಿಯೆಯನ್ನು ಉಂಟುಮಾಡುತ್ತಿಲ್ಲ" ಎಂದಳು.

ಆದರೆ 1912 ರಲ್ಲಿ ಬೊಲ್ಶೆವಿಕ್ ಮತ್ತು ಮೆನ್ಶೆವಿಕ್ ಪಕ್ಷದ ಹಲವಾರು ಪ್ರಮುಖ ಮಹಿಳೆಯರು ಮಹಿಳಾ ದಿನಾಚರಣೆಯ ವಿಷಯಕ್ಕೆ ಒತ್ತಾಯಿಸಿ ಪಕ್ಷದ ಗರಿಷ್ಠರಿಂದ ಅನುಮತಿ ಪಡೆದರು. ಹಾಗಾಗಿ 1913ರ ಮಾರ್ಚ್ 8 ರಂದು ಪೆಟ್ರೋಗಾಡ್‌ನಲ್ಲಿರುವ ಕಲಾಶಿನ್ ಕೋಪ್ ಎಕ್ಸ್‌ಚೇಂಜ್ ಮಹಿಳೆಯರಿಂದ ತುಂಬಿ ತುಳುಕುತ್ತಿತ್ತು.

1914ರಲ್ಲಿ ಮಾರ್ಚ್ 8 ರಂದು ಸೇರಿದ್ದ ಜನ ಸಂದಣಿಕಾರರನ್ನು ಕಂಡು ತ್ಸಾರ್ ಸರ್ಕಾರ ಎಚ್ಚೆತ್ತಿತು. ಕೆಲವು ಸಭೆಗಳಲ್ಲಿ ಭಾಷಣಕಾರರನ್ನು ಬಂಧಿಸಿದರೆ, ಮತ್ತೆ ಕೆಲವು ಜಾಗಗಳಲ್ಲಿ ಕಾರ್ಯಕ್ರಮ ನಡೆಯದಂತೆ ನೋಡಿಕೊಳ್ಳಲಾಯಿತು.

ಆದರೆ 1917ರಲ್ಲಿ ರಷ್ಯಾದಲ್ಲಿ ನಡೆದ ಅಂತರ ರಾಷ್ಟ್ರೀಯ ಮಹಿಳಾ ದಿನ ಚರಿತ್ರಾರ್ಹವೂ, ಅವಿಸ್ಮರಣೀಯ ಅನುಭವವೂ ಆಗಿ ಉಳಿಯಿತು. ಆ ದಿನ 90,000 ಪೆಟ್ರೋಗ್ರಾಡ್ ಕಾರ್ಮಿಕರು ಮುಷ್ಕರ ಹೂಡಿದ್ದರು. ಪೆಟ್ರೋಗಾಡ್‌ನ ಅಂಗಡಿಗಳಲ್ಲಿ ಬ್ರೆಡ್ ಸಾಕಷ್ಟು ಇರಲಿಲ್ಲ. ಆಗ ಬ್ರೆಡ್‌ಗಾಗಿ ಕ್ಯೂನಲ್ಲಿ ನಿಂತಿದ್ದ ಮಹಿಳೆಯೊಬ್ಬಳು ಬ್ರೆಡ್ ಅಂಗಡಿಯ ಕಿಟಕಿಗೆ ಕಲ್ಲೊಂದು ಎತ್ತಿ ಒಗೆದಳು. ಈ ಘಟನೆಯೇ ಉಳಿದ ಮಹಿಳೆಯರಿಗೂ ಸ್ಫೂರ್ತಿ ನೀಡಿತು. ತಮ್ಮ ಮಕ್ಕಳಿಗೆ, ಕುಟುಂಬಗಳಿಗೆ ಆಹಾರ ದೊರಕಿಸಲಾಗದ ಮಹಿಳೆಯರು, ಅವರೊಂದಿಗೆ ಸೋಷಿಯಲಿಷ್ಟರು ಮತ್ತು ಕೆಲವು ಪ್ರಗತಿ ಪರರು ಒಟ್ಟಾಗಿ ಸೇರಿ ಪ್ರತಿಭಟನಾ ಮೆರವಣಿಗೆಗಳನ್ನು ಮಾಡಿದರು. ಐದು ದಿನಗಳ ಕಾಲ ಸತತವಾಗಿ ನಡೆದ ಈ ಪ್ರದರ್ಶನಗಳ ಕಾವಿಗೆ ತ್ಸಾರನು ಮಣಿಯಲೇ ಬೇಕಾಯಿತು.

ಬೋಲ್ಶೆವಿಕ್ ಕ್ರಾಂತಿಯ ನಂತರ ಅಂತರರಾಷ್ಟ್ರೀಯ ಮಹಿಳಾ ದಿನ ರಷ್ಯಾದಲ್ಲಿ ಕಡ್ಡಾಯವಾದ ಆಚರಣೆಯಾಗಿ ಉಳಿಯಿತು.

ಚೀನಾದಲ್ಲಿ ಮಹಿಳಾ ದಿನವನ್ನು ಮೊದಲ ಬಾರಿಗೆ 1924ರಲ್ಲಿ ಆಚರಿಸಲಾಯಿತು. ಆಗಿನ Kuomintang ಪಕ್ಷವು ಮಹಿಳಾ ವಿಮೋಚನಾ ಚಳವಳಿಯನ್ನು ಕ್ರಾಂತಿಯೊಂದಿಗೆ ಸೇರಿಸಿತು. ಒಂದು ಕರಪತ್ರವನ್ನು ಹೊರಡಿಸಿ, ಎಲ್ಲ ಮಹಿಳೆಯರನ್ನು ಒಂದಾಗಿ ಸಂಘಟಿತರಾಗಿ ಅವರ ಮುಖ್ಯ ಕಾರ್ಯಕ್ಷೇತ್ರವಾದ guangdongನಲ್ಲಿ ಪ್ರತಿಭಟನೆ ಮಾಡಲು ಕರೆ ನೀಡಿತು. ಅವರು ಪ್ಲೆಕಾರ್ಡುಗಳನ್ನು ಮಾಡಿ "ವಿದೇಶಿ ಸಾಮ್ರಾಜ್ಯಶಾಹಿಗೆ ಧಿಕ್ಕಾರ, ಚೀನಾವನ್ನು ಆದರ ವಸಾಹತುಶಾಹಿ ಸ್ಥಾನದಿಂದ ಮುಕ್ತಗೊಳಿಸಿ" ಎಂಬ ಘೋಷಣೆಗಳನ್ನು ಬರೆದು ಮಹಿಳಾ ದಿನವನ್ನು ಆಚರಿಸಿದರು.

ಎರಡನೆಯ ಮಹಾ ಸಮರದ ನಂತರ ಅಂತರ ರಾಷ್ಟ್ರೀಯ ಮಹಿಳಾ ದಿನದ ಬಹು ಮುಖ್ಯ ಘೋಷಣೆಯು ವಿಶ್ವಶಾಂತಿಯ ಬೇಡಿಕೆಯಾಗಿತ್ತು. ವಿಶೇಷವಾಗಿ ಬ್ರಿಟನ್ ಮತ್ತು ಯುರೋಪ್‌ಗಳಲ್ಲಿ ವಿಶ್ವ ಶಾಂತಿ ದಿನವೆಂದೇ ಮಹಿಳಾ ದಿನವನ್ನು ಆಚರಿಸಲಾಗುತ್ತಿತ್ತು.

ಆರಂಭದಲ್ಲಿ ಬದಲಾವಣೆಯ ಬೇಡಿಕೆಯೊಂದಿಗೆ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಆರಂಭವಾದ ಮಹಿಳಾ ದಿನ ಸೋಷಿಯಲಿಸ್ಟ್ ಪ್ರಪಂಚದಾದ್ಯಂತ ಹರಡಿ ಈಗ ಅಂತರರಾಷ್ಟ್ರೀಯವಾಗಿ ಮಾನ್ಯವಾದ ಮಹಿಳಾ ದಿನವಾಗಿದೆ.

ಥೈಲ್ಯಾಂಡಿನಲ್ಲಿ ವೇಶ್ಯಾವೃತ್ತಿ ಮತ್ತು ಯಾತ್ರಿಕರಿಗಾಗಿ ಲೈಂಗಿಕ ಸೇವೆಯು ಬಹು ಮುಖ್ಯ ಸಮಸ್ಯೆಯಾಗಿದ್ದವು. 1984ರಲ್ಲಿ ಐದು ಹುಡುಗಿಯರ ಸುಟ್ಟ ದೇಹವು ವೇಶ್ಯಾವಾಟಿಕೆಯಲ್ಲಿ ದೊರೆತ ನಂತರ, ಇದು ಎಲ್ಲರ ಗಮನ ಸೆಳೆಯಿತು. ಆ ವರ್ಷ ಅಂತರರಾಷ್ಟ್ರೀಯ ಮಹಿಳಾ ದಿನವನ್ನು Anti Trafficking Women Week ಪ್ರಚಾರ ದಿನವನ್ನಾಗಿ ಆಚರಿಸಲಾಯಿತು.

1986ರ ಮಾರ್ಚ್ 8 ರಂದು ಮನಿಲಾದಲ್ಲಿ ನಡೆದ ಅಂತರರಾಷ್ಟ್ರೀಯ ಮಹಿಳಾ ದಿನದಲ್ಲಿ 70 ಗುಂಪುಗಳಿಗೆ ಸೇರಿದ ಸಾವಿರಾರು ಫಿಲಿಪಿನ್ ಮಹಿಳೆಯರು ಸೇರಿ ಆಗ ಅಲ್ಲಿ ವೇದಿಕೆಯ ಹಿಂದೆ ಬರೆದ ದೊಡ್ಡ ಘೋಷಣೆ ಹೀಗಿತ್ತು : "ಮಹಿಳೆಯರು ಸ್ವತಂತ್ರರಾಗದಿದ್ದರೆ ಆ ದೇಶವು ಸ್ವತಂತ್ರ ದೇಶವಲ್ಲ".

1920ರಲ್ಲಿ ಮಾರ್ಗರೇಟ್ ಸಾಂಗರ್, ಮಹಿಳಾ ದಿನದ ತೊಟ್ಟಿಲಾದ ನ್ಯೂಯಾರ್ಕ್‌ನಲ್ಲಿ ಹೀಗೆ ನುಡಿದಿದ್ದಳು : "ನಮ್ಮ ಆಸಕ್ತಿಯೆಲ್ಲವೂ ಮಹಿಳೆಯರನ್ನು ಸ್ವತಂತ್ರಗೊಳಿಸುವುದರಲ್ಲಿ ಸರ್ಕಾರದ ಅಧಿಕಾರದತ್ತಲ್ಲ."

ಇಂದು ವಿಶ್ವದ ಮಹಿಳೆ ಈ ಘೋಷಣೆಯಾಚೆಗೂ ಬೆಳೆದಿದ್ದಾಳೆ, ಪುರುಷಾಧಿಕಾರದ ಎಲ್ಲ ನೆಲೆಗಳನ್ನು ಪ್ರಶ್ನಿಸುತ್ತಾ ಮುಂದೆ ಸಾಗಿದ್ದಾಳೆ.

* ಮಹಿಳಾ ಚಳವಳಿಯಲ್ಲಿ ಪಾಲುಗೊಳ್ಳುತ್ತಿರುವ ಮಹಿಳೆಯರು ಈ ಒಂದು ಅಂಶದ ಬಗ್ಗೆ ಪ್ರಜ್ಞಾವಂತರಾಗಿರಬೇಕು.... ಅದೆಂದರೆ ಅವರ ಪ್ರಯತ್ನಗಳು.... ಕೇವಲ ಅವರ ಮಟ್ಟಿಗೆ ಕೂಡಲೇ ಅನುಕೂಲಕರವಲ್ಲದಿರಬಹುದು.... ಆದರೆ ಅವು ನಷ್ಟ ಹಾಗೂ ಪರಿತ್ಯಾಗಗಳಿಗೆ ದಾರಿ ಮಾಡಿಕೊಡಬಹುದು. ಇವುಗಳಿಂದಲೇ ಈ ಚಳವಳಿಗೆ ಆದರ ವಿಶಿಷ್ಟ ಧ್ವನಿ ದೊರೆತಿದ್ದು, ಆರ್ಥಿಕ ಚಳವಳಿಗಳ ದೊಡ್ಡ ರಾಶಿಯಿಂದ ಅದು ಬೇರೆಯಾಗಿ ನಿಲ್ಲುವಂತಾಗಿದೆ. ಯುಗಗಳ ಮಧ್ಯಂತರಗಳಲ್ಲಿ ಮಾನವ ಜನಾಂಗವನ್ನು ಪ್ರತಿರೋಧವೇ ಇಲ್ಲದಂತೆ ಸುಧಾರಿಸುವ ಪುನಃ ಸಂಯೋಜಿಸುವ ವಿಶಾಲವ್ಯಾಪ್ತಿಯ ಧಾರ್ಮಿಕ ಬೆಳವಣಿಗೆಗಳ ಸಾಲಿನಲ್ಲಿ ಈ ಚಳವಳಿಯನ್ನು ಆ ಧ್ವನಿ ನಿಲ್ಲಿಸಿದೆ.

Olive Schreiner

* "ತುಳಿತಕ್ಕೊಳಗಾದ ಎಲ್ಲ ಜನಗಳಂತೆ ಮಹಿಳೆಯರೂ ಮೌನ ಸಂಸ್ಕೃತಿಯಲ್ಲಿ ಬದುಕುತ್ತಾರೆ"

–ರೋಸ್ ಮೇರಿ "ಲಿಬರೇಷನ್ ಥಿಯಾಲಜಿ"

Reg No. MAG (5) PRC. DEGL 036/89/87
BOOK-POST/Periodicals

To

If undelivered please return to :
Jagruthi Mahila Adhyayana Kendra
401, Vijay Tower, 2nd Main, RPC Layout
Viayanagar, II Stage, Bangalore-560 040.